ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕಳೆದ 5 ವರ್ಷಗಳಿಂದ ಭಾರತ ಪುರುಷರ ಕ್ರಿಕೆಟ್ ತಂಡದ ಫೀಲ್ಡಿಂಗ್ ಕೋಚ್ ಆಗಿದ್ದ ಟಿ.ದಿಲೀಪ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಜಾಗಕ್ಕೆ ಸುಭದೀಪ್ ಘೋಷ್ ಅವರನ್ನು ಬಿಸಿಸಿಐ ನೇಮಿಸಿದೆ.

05 ಆಗಸ್ಟ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -145 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಸ್ವಾತಂತ್ರ್ಯದ ಶಾಶ್ವತ ಧ್ವನಿ ವಂದೇ ಮಾತರಂ » 2


ಮಾನವ ಕಳ್ಳ ಸಾಗಣಿಕೆ ಘೋರ ಅಪರಾಧ » 3


ನೈತಿಕ, ಸಮಾಜಮುಖಿ ಪತ್ರಿಕೋದ್ಯಮಕ್ಕೆ ಆದ್ಯತೆ ನೀಡಿ » 4

# ರಾಜೀನಾಮೆ ನೀಡಿದ್ರೆ ತಕ್ಷಣ ಅಂಗೀಕಾರ

## ಅಸಮಾಧಾನಿತ ಶಾಸಕರಿಗೆ ಡಿ.ಕೆ.ಶಿವಕುಮಾರ್ ಎಚ್ಚರಿಕೆ | ಸಚಿವ ಸ್ಥಾನ ಸಿಗದಿದಕ್ಕೆ ಬೆಂಬಲಿಗರ ಪ್ರತಿಭಟನೆ

• ಪ್ರಜೋದಯ ವರದಿ

**ಬೆಂಗಳೂರು:** ಸಚಿವ ಸಂಪುಟ ವಿಸ್ತರಣೆ ಬಳಿಕ ಸಚಿವ ಸ್ಥಾನ ಕೈತಪ್ಪಿದ ಕೆಲ ಕಾಂಗ್ರೆಸ್ ಶಾಸಕರಲ್ಲಿ ಅಸಮಾಧಾನ ಭುಗಿಲೆದ್ದಿದೆ. ಈ ಹಿನ್ನಲೆ ಕೆಲವು ಶಾಸಕರು ರಾಜೀನಾಮೆ ನೀಡುವ ಬೆದರಿಕೆ ಹಾಕಿದ್ದು, ಅದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈ ವಿಚಾರವಾಗಿ ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕರೆ ಮಾಡಿ, ರಾಜೀನಾಮೆ ಬೆದರಿಕೆ ಹಾಕುವವರ ವಿವರ ಕೇಳಿದೆ. ರಾಜೀನಾಮೆ ನೀಡಿದರೆ ಅದನ್ನು ತಕ್ಷಣವೇ ಅಂಗೀಕರಿಸುವಂತೆ ಸೂಚಿಸಿದೆ.

ಅದರ ಬೆನ್ನಲ್ಲೇ ಡಿ.ಕೆ.ಶಿವಕುಮಾರ್ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಶಾಸಕರು ರಾಜೀನಾಮೆ ನೀಡಿದರೆ ಎರಡೇ ನಿಮಿಷದಲ್ಲಿ ಅಂಗೀಕರಿಸಲು ಹೇಳಿದ್ದೇನೆ. ಸಚಿವ ಸ್ಥಾನ ಸಿಗದ ವರಿಗೆ ನಿಗಮ ಮಂಡಳಿ ಹುದ್ದೆಗಳನ್ನು ನೀಡಲಾಗುವುದು. ಆದರೂ ರಾಜೀನಾಮೆಗೆ ಮುಂದಾದರೆ, ಹೈಕಮಾಂಡ್ ಸೂಚನೆಯಂತೆ ಅದನ್ನು ಸ್ವೀಕರಿಸಲಾಗುವುದೆಂದು ಅವರು ಸ್ಪಷ್ಟಪಡಿಸಿದ್ದಾರೆ. ವೀರೇಂದ್ರ ಪಾಟೀಲ್ ಕಾಲದಲ್ಲಿ ಬಂಗಾರಪ್ಪ, ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಅವರಿಗೆ ಸಚಿವ ಸ್ಥಾನ ಕೊಟ್ಟಿರಲಿಲ್ಲ. ನಾನು, ಪರಮೇಶ್ವರ್ ಕೂಡ ಸಚಿವ ಸ್ಥಾನ ಕೊಡದಿದ್ದಾಗ ಸುಮ್ಮನೆ ಇರಲಿಲ್ಲವೇ?. ನಾನು ತಾಳ್ಮೆಯಿಂದ ಇರಲಿಲ್ಲವೇ? ಎಲ್ಲರೂ ತಾಳ್ಮೆಯಿಂದ ಇರಬೇಕೆಂದು ಹೇಳಿದರು.



### ಮುಂದುವರೆದ ಅಸಮಾಧಾನಿತರ ಸರಣಿ

ಸಚಿವ ಸಂಪುಟ ವಿಸ್ತರಣೆ ಬಳಿಕ ಕಾಂಗ್ರೆಸ್‌ನಲ್ಲಿ ಅಸಮಾಧಾನದ ಸರಣಿ ಮುಂದುವರಿದಿದ್ದು, ಹಲವು ಶಾಸಕರು ಬಹಿರಂಗವಾಗಿ ಅಸಮಾಧಾನ ಹೊರಹಾಕುತ್ತಿದ್ದಾರೆ. ಬೆಂಬಲಿಗರ ಪ್ರತಿಭಟನೆ, ರಾಜೀನಾಮೆ ಎಚ್ಚರಿಕೆ ಹಾಗು ನಾಯಕರ ನಡುವಿನ ಆರೋಪ-ಪ್ರತ್ಯಾರೋಪಗಳು ಪಕ್ಷದ ನಾಯಕತ್ವಕ್ಕೆ ಹೊಸ ಸವಾಲು ತಂದಿವೆ. ಈ ಅಸಮಾಧಾನವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗು ಕಾಂಗ್ರೆಸ್ ಹೈಕಮಾಂಡ್ ಹೇಗೆ ಶಮನಗೊಳಿಸಲಿದೆ ಎಂಬುದು ಕುತೂಹಲ ಮೂಡಿಸಿದೆ.

> **ಪಕ್ಷದಲ್ಲಿ ಎಲ್ಲರಿಗೂ ಅವಕಾಶ ನೀಡಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಎಲ್ಲರೂ ಅರ್ಥ ಮಾಡಿಕೊಳ್ಳ ಬೇಕು. ನಮ್ಮ ಪಕ್ಷದಲ್ಲಿ ನಾಯಕತ್ವದ ದಿವಾಳಿತನವಿಲ್ಲ, ಪ್ರತಿಯೊಬ್ಬರೂ ನಾಯಕರೇ. ಹೊಸಬರಿಗೆ ಅವಕಾಶ ಮಾಡಿಕೊಡುವ ನಿಟ್ಟನಲ್ಲಿ ಈ ಬಾರಿ ಕೆಲವು ಹಿರಿಯರಿಗೆ ಅವಕಾಶ ಕೈತಪ್ಪಿದೆ. ಆದಾಗ್ಯೂ ಎಲ್ಲಾ ಸಮುದಾಯಗಳಿಗೂ ಸಮಾನ ಪ್ರಾತಿನಿಧ್ಯ ನೀಡಲಾಗಿದೆ.**
> **-ಬಿ.ಕೆ.ಹರಿಪ್ರಸಾದ್, ಕೆಪಿಸಿಸಿ ಅಧ್ಯಕ್ಷ**

**ರಾಜೀನಾಮೆ ಎಚ್ಚರಿಕೆ, ಬೆಂಬಲಿಗರ ಪ್ರತಿಭಟನೆ**

ಸಚಿವ ಸ್ಥಾನ ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದು ಹುಸಿಯಾದ ಬೆನ್ನಲ್ಲೇ ಹಲವು ಶಾಸಕರು ಬಹಿ ರಂಗವಾಗಿಯೇ ಅಸಮಾಧಾನ ಹೊರ ಹಾಕಿದ್ದಾರೆ. ಕೆಲವರು ಶಾಸಕ ಸ್ಥಾನ ಹಾಗು ನಿಗಮ-ಮಂಡಳಿ ಸ್ಥಾನಕ್ಕೆ ರಾಜೀನಾಮೆ ನೀಡುವ ಎಚ್ಚರಿಕೆ ನೀಡಿದ್ದಾರೆ. ಮತ್ತೊಂದೆಡೆ, ಶಾಸಕರ ಬೆಂಬಲಿಗರು ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಜಯಪುರ ಜಿಲ್ಲೆಯ ಇಂಡಿ ಕ್ಷೇತ್ರದ ಶಾಸಕ ಯಶವಂತರಾಯಗೌಡ ವಿ.ಪಾಟೀಲ್, ಸಚಿವ ಸ್ಥಾನ ಕೈತಪ್ಪಿರುವುದಕ್ಕೆ ಬೇಸರ ವ್ಯಕ್ತಪಡಿಸಿದ್ದಾರೆ. ಪ್ರಾಮಾಣಿಕರು ಹಾಗು ಪಕ್ಷದ ನಿಷ್ಠಾವಂತರಿಗೆ ಇದು ಕಾಲವಲ್ಲವೆಂದು ಅಸಮಾಧಾನ ಹೊರಹಾಕಿದ್ದಾರೆ. ಇನ್ನು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿ ಯಾಗಿದ್ದ ಶಾಸಕ ಬೇಳೂರು ಗೋಪಾಲಕೃಷ್ಣ ಕೂಡ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಉದ್ದೇಶ ಪೂರ್ವಕವಾಗಿಯೇ ತಮಗೆ ಸಚಿವ ಸ್ಥಾನ ತಪ್ಪಿಸಲಾಗಿದೆ ಎಂದು ಆರೋಪಿಸಿರುವ ಅವರು, ಶಾಸಕ ಸ್ಥಾನ ಹಾಗೂ ನಿಗಮ-ಮಂಡಳಿಸ್ಥಾನಕ್ಕೆರಾಜೀನಾಮೆ ನೀಡುವ ಎಚ್ಚರಿಕೆ ನೀಡಿದ್ದಾರೆ. » ನಾಲ್ಕನೇ ಪುಟದಲ್ಲಿ

## ಮಣ್ಣು ತೆರವು ಕಾರ್ಯ ಪೂರ್ಣ: ರೈಲು ಸಂಚಾರ ಆರಂಭ



• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದಲ್ಲಿ ಸುರಿದ ಭಾರೀ ಮಳೆಯಿಂದ ಗುಡ್ಡ ಕುಸಿತದ ಹಿನ್ನಲೆ ಸ್ಥಗಿತಗೊಂಡಿದ್ದ ಯಡಕುಮರಿ-ಶಿರಿವಾಗಿಲು ನಡುವಿನ ರೈಲು ಸಂಚಾರ ಮಂಗಳವಾರ ಪುನರಾರಂಭ ಗೊಂಡಿದೆ. ರೈಲ್ವೆ ಇಲಾಖೆ ಮಣ್ಣು ತೆರವು ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಬಳಿಕ ರೈಲುಗಳ ಓಡಾಟಕ್ಕೆ ಅನುಮತಿ ನೀಡಿದೆ.

ತಾಲ್ಲೂಕಿನ ಪಶ್ಚಿಮಘಟ್ಟ ಪ್ರದೇಶದಲ್ಲಿ ಭಾರೀ ಮಳೆಯ ಪರಿಣಾಮ ರೈಲು ಹಳಿ ಮೇಲೆ ಮಣ್ಣು ಹಾಗು ಬಂಡೆಗಳು ಕುಸಿದು ಬಿದ್ದಿದ್ದರಿಂದ ಬೆಂಗಳೂರು-ಮಂಗಳೂರು ಮಾರ್ಗದ ರೈಲು ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ರೈಲ್ವೆ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಜೆಸಿಬಿ ಸೇರಿ ವಿವಿಧ ಯಂತ್ರೋಪಕರಣಗಳ ನೆರವಿನಿಂದ ಮಣ್ಣು ಮತ್ತು ಬಂಡೆಗಳನ್ನು ತೆರವುಗೊಳಿಸುವ ಕಾರ್ಯ ಕೈಗೊಂಡರು.

ನಿರಂತರವಾಗಿ ಎರಡು ದಿನಗಳ ಕಾಲ ನಡೆದ ಮಣ್ಣು ತೆರವು ಕಾರ್ಯ » ನಾಲ್ಕನೇ ಪುಟದಲ್ಲಿ

# ಬರ ಪರಿಸ್ಥಿತಿ ಅಧ್ಯಯನ: ಸಚಿವರಿಗೆ ಹೊಣೆ

## ಜಿಲ್ಲಾ ಪ್ರವಾಸ ಕೈಗೊಂಡು, ಖುದ್ದಾಗಿ ಪರಿಶೀಲಿಸುವಂತೆ ಸಿ.ಎಂ. ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅತಿವೃಷ್ಟಿ ಹಾಗು ಬರ ಪರಿಸ್ಥಿತಿಯ ಹಿನ್ನಲೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಿಲ್ಲಾವಾರು ಪರಿಸ್ಥಿತಿ ಅಧ್ಯಯನಕ್ಕೆ ಸಚಿವರಿಗೆ ಜವಾಬ್ದಾರಿ ವಹಿಸಿದ್ದಾರೆ. ತಮಗೆ ವಹಿಸಿರುವ ಜಿಲ್ಲೆಗಳಿಗೆ ತಕ್ಷಣ ಪ್ರವಾಸ ಕೈಗೊಂಡು, ಪ್ರತಿಯೊಂದು ತಾಲ್ಲೂಕಿನಲ್ಲಿನ ವಾಸ್ತವ ಪರಿಸ್ಥಿತಿ ಯನ್ನು ಖುದ್ದಾಗಿ ಪರಿಶೀಲಿಸುವಂತೆ ಸಚಿವರಿಗೆ ಸೂಚನೆ ನೀಡಿದ್ದಾರೆ.

ಸಚಿವರು ಸ್ಥಳೀಯ ಪರಿಸ್ಥಿತಿಯನ್ನು ಪರಿಶೀಲಿಸಿ, ಮಳೆ, ಬೆಳೆ ಹಾನಿ, ಬರದ ಸ್ಥಿತಿ ಸೇರಿ ವಾಸ್ತವಾಂಶಗಳ ವರದಿಯನ್ನು ತಕ್ಷಣ ಉಪಮುಖ್ಯ ಮಂತ್ರಿ ಹಾಗು ಕಂದಾಯ ಸಚಿವರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

ರಾಜ್ಯದ ಕೆಲವೆಡೆ ಮಳೆ ಹೆಚ್ಚಾಗಿ ಅತಿವೃಷ್ಟಿಯ ಪರಿಸ್ಥಿತಿ ನಿರ್ಮಾಣವಾಗಿದ್ದರೆ, ಮತ್ತೊಂದೆಡೆ ಮಳೆ ಕೊರತೆಯಿಂದ ಬರದ ಆತಂಕ ಎದುರಾಗಿದೆ. ಹೀಗಾಗಿ ಜಿಲ್ಲಾವಾರು ಪರಿಸ್ಥಿತಿಯನ್ನು ಸಚಿವರು ನೇರವಾಗಿ ಪರಿಶೀಲಿಸಿ, ಸರ್ಕಾರಕ್ಕೆ ವಾಸ್ತವ ವರದಿ ಸಲ್ಲಿಸುವುದು ಮಹತ್ವ ಪಡೆದಿದೆ. ಸ್ಥಳೀಯ ಅಧಿಕಾರಿಗಳು, ರೈತರು ಹಾಗೂ ಸಾರ್ವಜನಿಕರಿಂದ ಮಾಹಿತಿ ಪಡೆದು ಪರಿಸ್ಥಿತಿಯ ಸಮಗ್ರ ಚಿತ್ರಣವನ್ನು ಸರ್ಕಾರದ ಗಮನಕ್ಕೆ ತರುವಂತೆ ಸಚಿವರಿಗೆ ಸೂಚಿಸಲಾಗಿದೆ. ವರದಿಯ ಆಧಾರದ ಮೇಲೆ ಮುಂದಿನ ಬರ ನಿರ್ವಹಣೆ ಹಾಗೂ ಪರಿಹಾರ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ.

ಯಾವ ಜಿಲ್ಲೆಗೆ ಯಾರ ಉಸ್ತುವಾರಿ

ಕೆ.ಎಂ.ಶಿವಲಿಂಗೇಗೌಡ-ಹಾಸನ, ಡಾ.ಜಿ.ಪರಮೇಶ್ವರ್-ತುಮಕೂರು, ಟಿ.ರಘುಮೂರ್ತಿ-ಚಿತ್ರದುರ್ಗ, ಬೈರತಿ ಸುರೇಶ್-ಚಿಕ್ಕಬಳ್ಳಾಪುರ, ಕೆ.ಹೆಚ್.ಮುನಿಯಪ್ಪ-ಬೆಂಗಳೂರು ಗ್ರಾಮಾಂತರ, ರಾಮಲಿಂಗಾರೆಡ್ಡಿ-ಕೋಲಾರ, ಹೆಚ್.ಸಿ.ಬಾಲಕೃಷ್ಣ -ಬೆಂಗಳೂರು ದಕ್ಷಿಣ, ಜಮೀರ್ ಅಹ್ಮದ್ ಖಾನ್-ವಿಜಯನಗರ, ಕೆ.ಜೆ. ಜಾರ್ಜ್-ಚಿಕ್ಕಮಗಳೂರು, ಮಧು ಬಂಗಾರಪ್ಪ-ಶಿವಮೊಗ್ಗ, ಎಂ.ಬಿ. ಪಾಟೀಲ್- ವಿಜಯಪುರ, ಬಾಗಲಕೋಟೆ, ವಿಜಯಾನಂದ ಕಾಶಪ್ಪನವರ-ದಾವಣಗೆರೆ, ಎಸ್.ಎಸ್. ಮಲ್ಲಿಕಾರ್ಜುನ-ದಾವಣಗೆರೆ, ರುದ್ರಪ್ಪ ಲಮಾಣಿ-ಹಾವೇರಿ, ಬಸವರಾಜ ರಾಯರೆಡ್ಡಿ -ಗದಗ, ಸತೀಶ್ ಜಾರಕಿಹೊಳಿ-ಬೆಳಗಾವಿ, ಸಂತೋಷ್ ಲಾಡ್- ಧಾರವಾಡ, ಲಕ್ಷ್ಮಣ ಸವದಿ-ಉತ್ತರ ಕನ್ನಡ, ಪ್ರಿಯಾಂಕ್ ಖರ್ಗೆ-ಕಲಬುರಗಿ, ಡಾ.ಅಜಯ್ ಸಿಂಗ್ -ರಾಯಚೂರು, ಈಶ್ವರ್ ಖಂಡ್ರೆ-ಬೀದರ್, ಪಿ.ಎಂ.ನರೇಂದ್ರಸ್ವಾಮಿ-ಕೊಡಗು, ಯು.ಟಿ. ಖಾದರ್ -ದಕ್ಷಿಣ ಕನ್ನಡ, ಉಡುಪಿ, ಯತೀಂದ್ರ ಸಿದ್ದರಾಮಯ್ಯ-ಮೈಸೂರು, ಚೆಲುವರಾಯಸ್ವಾಮಿ-ಮಂಡ್ಯ, ಪುಟ್ಟರಂಗ ಶೆಟ್ಟಿ-ಚಾಮರಾಜನಗರ, ಬಿ.ನಾಗೇಂದ್ರ- ಬಳ್ಳಾರಿ, ಶರಣ ಪ್ರಕಾಶ ಪಾಟೀಲ್-ಯಾದಗಿರಿ, ಶಿವರಾಜ್ ಸಂಗಪ್ಪ ತಂಗಡಗಿ- ಕೊಪ್ಪಳ, ಕೃಷ್ಣ ಬೈರೇಗೌಡ -ಬೆಂಗಳೂರು ನಗರ ಉಸ್ತುವಾರಿ ಹೊಣೆಯನ್ನು ವಹಿಸಲಾಗಿದೆ.

# ಶಿವಲಿಂಗೇಗೌಡ ಉತ್ತಮ ಆಡಳಿತ ನೀಡಿ ಹೆಸರು ಗಳಿಸಲಿ

## ನಮ್ಮಿಂದ ಕೆಲಸ ಮಾಡಲು ಆಗಿಲ್ಲ, ಅವರು ಮಾಡಲಿ: ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ

**ಹಾಸನ:** ಸಚಿವ ಸ್ಥಾನ ಪಡೆದುಕೊಂಡಿರುವ ಕೆ.ಎಂ.ಶಿವಲಿಂಗೇಗೌಡ ಅವರು ಉತ್ತಮ ಕೆಲಸ ಮಾಡಿ ಜನರ ಮೆಚ್ಚುಗೆ ಪಡೆಯಲಿ. ನಮ್ಮಿಂದ ಕೆಲಸ ಮಾಡಲು ಆಗಲಿಲ್ಲ. ಅವರ ಮೇಲೆ ಯಾವುದೇ ದ್ವೇಷವಿಲ್ಲ. ಜಿಲ್ಲೆಯ ಜನರಿಗಾಗಿ ಉತ್ತಮ ಆಡಳಿತ ನೀಡಿ ಹೆಸರು ಗಳಿಸಲಿ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಹೇಳಿದರು.

ಸಚಿವರಾಗಿ ಕೆ.ಎಂ.ಶಿವಲಿಂಗೇಗೌಡ ಅವರನ್ನು ನೇಮಕ ಮಾಡಿರುವ ಕುರಿತು ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರತಿಕ್ರಿಯಿಸಿದ ಅವರು, ಉತ್ತಮ ಕೆಲಸ ಮಾಡುವುದಕ್ಕೆ ನಮಗೇನು ಹೊಟ್ಟೆ ಉರಿ ಇಲ್ಲ. ಉತ್ತಮ ಕೆಲಸ ಮಾಡಲು ದೇವರು ಶಕ್ತಿ ಕೊಡಲಿ.

ಕಾಂಗ್ರೆಸ್ ಪಕ್ಷದ ಇಬ್ಬರು ಶಾಸಕರ ರಾಜೀನಾಮೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅದು ಅವರ ಪಕ್ಷದ ಆಂತರಿಕ ವಿಚಾರ. ಅದರ ಬಗ್ಗೆ ನಾವು ತಲೆಕೆಡಿಸಿಕೊಂಡಿಲ್ಲ. ಮುಖ್ಯ



ಮಂತ್ರಿಗಳಿಗೆ ಇನ್ನೂ ಎರಡು ವರ್ಷ ಅಧಿಕಾರವಿದ್ದು, ದೇವರು ಅವಕಾಶ ಕೊಟ್ಟಿದ್ದಾರೆ. ರಾಜ್ಯಕ್ಕೆ ಉತ್ತಮ ಹೆಸರು ತರುವ ರೀತಿಯಲ್ಲಿ ಆಡಳಿತ ನಡೆಸಲಿ. ನಮಗೆ ಯಾರ ಮೇಲೂ ವೈಯಕ್ತಿಕ ದ್ವೇಷವಿಲ್ಲ. ನಾವು ಮಾಡಬೇಕೆಂದಿದ್ದ ಕೆಲಸವನ್ನು ಅವರೇ ಮಾಡಿದರೂ ನಮಗೆ ಸಂತೋಷವೇ ಎಂದು ತಿಳಿಸಿದರು.

### ಬರಪೀಡಿತ ಜಿಲ್ಲೆಯಾಗಿ ಘೋಷಿಸಲಿ

ಈ ವರ್ಷ ಜಿಲ್ಲೆಯಲ್ಲಿ ಸುಮಾರು 80 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆ ಹಾನಿಗೊಳಗಾಗಿದೆ. ಸರ್ಕಾರ ಕೂಡಲೇ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಬೆಳೆ ಹಾನಿಯ ಸಮಗ್ರ ಸಮೀಕ್ಷೆ ನಡೆಸಬೇಕು. ನಿಖರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಜಿಲ್ಲೆಯನ್ನು ತಕ್ಷಣವೇ ಬರಪೀಡಿತ ಜಿಲ್ಲೆ ಎಂದು ಘೋಷಿಸಬೇಕೆಂದು ರೇವಣ್ಣ ಅವರು ಆಗ್ರಹಿಸಿದರು.

**ರೈತರು ಬೆಳೆದ ಬೆಳೆ ನಾಶ**

ಹಿಂದೆ ಜಿಲ್ಲೆಯಲ್ಲಿ ಮೂರರಿಂದ ನಾಲ್ಕು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆಯ ಲಾಗುತ್ತಿತ್ತು. ನಂತರ ಅದು ಸುಮಾರು ಮೂರು ಸಾವಿರ ಎಕರೆಗೆ ಬಂದು ತಲುಪಿದೆ. ಆದರೆ, ಅಂಗಮಾರಿ ರೋಗಬಾಧೆಯಿಂದ ಆಲೂಗೆಡ್ಡೆ ಬೆಳೆ ಸಂಪೂರ್ಣ ನಾಶವಾಗಿದ್ದು, ಇದೀಗ ರೈತರು ಮೆಕ್ಕೆಜೋಳ ಬೆಳೆಯುವತ್ತ ಮುಖ ಮಾಡಿದ್ದಾರೆಂದು ಹೇಳಿದರು.

ಈ ವರ್ಷ ರೈತರ ಬೆಳೆ ಸಂಪೂರ್ಣ ನಾಶವಾಗಿದ್ದು, ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ರೈತರ ಸಾಲ ಮನ್ನಾ ಮಾಡಬೇಕು. ರೈತರಿಂದ ಬೆಳೆಗಳನ್ನು ಮಧ್ಯವರ್ತಿಗಳ ಮೂಲಕ ವಲ್ಲ, ಸರ್ಕಾರವೇ ನೇರವಾಗಿ ಖರೀದಿಸಬೇಕು. ಮಹಾರಾಜರ ಕಾಲದ ನಾಲೆಗಳಿಗೆ ನೀರು ಹರಿಸುವ ವ್ಯವಸ್ಥೆ ಮಾಡಬೇಕು. ರೈತರು ಯಾವ ಬೆಳೆ ಬೆಳೆಯಬೇಕೆಂಬುದರ ಬಗ್ಗೆ ಸರ್ಕಾರ ಸೂಕ್ತ ಮಾರ್ಗದರ್ಶನ ನೀಡಬೇಕು. ಅದು ಸಾಧ್ಯವಾಗದಿದ್ದರೆ ಬೆಳೆ ನಷ್ಟಕ್ಕೆ ಸಮರ್ಪಕ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಕೃಷಿ, ತೋಟಗಾರಿಕೆ ಬೆಳೆಗಳು ಎಷ್ಟು ಪ್ರಮಾಣದಲ್ಲಿ ನಷ್ಟವಾಗಿದೆ ಎಂಬುದನ್ನು ಸಮೀಕ್ಷೆ ನಡೆಸಿ, ಸರ್ಕಾರಕ್ಕೆ ಸಮರ್ಪಕ ವರದಿ ಸಲ್ಲಿಸಬೇಕು. ಸಾಧ್ಯವಾದರೆ ನಾಲೆಗಳಿಗೆ ನೀರು ಹರಿಸಲಿ, ಇಲ್ಲವಾದರೆ ಪರ್ಯಾಯ ಬೆಳೆಯನ್ನು ಸೂಚಿಸಬೇಕು. ಇಲ್ಲವಾದರೆ, ರೈತರಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದು ಒತ್ತಾಯಿಸಲಾಗುವುದು. ಈ ಬಗ್ಗೆ ವಿಧಾನ ಸಭೆ ಅಧಿವೇಶನದಲ್ಲೂ ಪ್ರಸ್ತಾಪ ಮಾಡಲಾಗುವುದೆಂದು ತಿಳಿಸಿದರು.

ತಮಿಳುನಾಡಿಗೆ ನೀರು ಹರಿಸುವ ಉದ್ದೇಶವಿದ್ದರೆ ಮೊದಲು ರಾಜ್ಯದ ರೈತರಿಗೆ ಬೆಳೆ ನಷ್ಟ ಪರಿಹಾರ ನೀಡಬೇಕು. ಕಳೆದ ವರ್ಷದ ಬೆಳೆ ವಿಮೆ ಹಣವೂ ಇನ್ನೂ ರೈತರಿಗೆ ತಲುಪಿಲ್ಲ. ಈ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಈಗಾಗಲೇ ಮನವಿ ಮಾಡಿರುವುದಾಗಿ ತಿಳಿಸಿದರು.

# ಮೊಂಡತನದ ಮಾತು ಬಿಟ್ಟು ಅಭಿವೃದ್ಧಿಗೆ ಗಮನಹರಿಸಿ

## ಸಚಿವ ಶಿವಲಿಂಗೇಗೌಡಗೆ ಎ.ಮಂಜು ಸಲಹೆ

• ಪ್ರಜೋದಯ ವರದಿ

**ಹಾಸನ :** ಶಿವಲಿಂಗೇಗೌಡ ಅವರು ಮೊಂಡತನದ ಮಾತುಗಳನ್ನು ಬಿಟ್ಟು ಜಿಲ್ಲೆಯ ಅಭಿವೃದ್ಧಿಯತ್ತ ಗಮನ ಹರಿಸಬೇಕು. ಸಚಿವರಾದ ಮೇಲೆ ಕೇವಲ ಅರಸೀಕೆರೆಯನ್ನಷ್ಟೇ ಅಲ್ಲ, ಇಡೀ ಜಿಲ್ಲೆಯನ್ನು ಗಮನದಲ್ಲಿಟ್ಟು ಕೊಂಡು ಕೆಲಸ ಮಾಡಬೇಕೆಂದು ಮಾಜಿ ಸಚಿವ ಎ.ಮಂಜು ಅವರು ಸಲಹೆ ನೀಡಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಪಕ್ಷದಲ್ಲಿ ಇದ್ದಾಗ ಕೆಲಸ ಮಾಡಲು ಅವಕಾಶ ಕೊಡಲಿಲ್ಲವೆಂದು ಪಕ್ಷದವರನ್ನೇ ಟೀಕಿಸುತ್ತಿದ್ದರು. ಈಗ ಸಚಿವ ಸ್ಥಾನ ಸಿಕ್ಕಿರುವುದರಿಂದ ಉತ್ತಮ ಕೆಲಸ ಮಾಡಿ ಹೆಸರು ಗಳಿಸಲಿ.



ಜಿಲ್ಲೆಯ ಅಭಿವೃದ್ಧಿಗೆ ನಮ್ಮ ಸಹಕಾರವೂ ಇದೆ. ನಮ್ಮನ್ನು ಕೂಡ ಉಪಯೋಗಿಸಿಕೊಳ್ಳಬೇಕೆಂದು ಹೇಳಿದರು.

ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಉಲ್ಬಣವಾಗಿದ್ದು, ರೈತರಿಗೆ ತಕ್ಷಣ ಪರಿಹಾರ ನೀಡಬೇಕು ಅಥವಾ ಸಾಲ ಮನ್ನಾ ಮಾಡಬೇಕೆಂದು ಒತ್ತಾಯಿಸಿದ ಅವರು, ಸರ್ಕಾರ ನಿಜವಾಗಿಯೂ ರೈತರ ಪರವಾಗಿದ್ದರೆ ಸಂಕಷ್ಟದ ಸಮಯದಲ್ಲಿ ರೈತರ ನೆರವಿಗೆ ಬರಬೇಕು. ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಸಾಲ ಮನ್ನಾ ಮಾಡಬೇಕು ಅಥವಾ ಎಕರೆಗೆ ನಿಗದಿತ ಪ್ರಮಾಣದಲ್ಲಿ ಪರಿಹಾರ ಘೋಷಿಸಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್‌ನಲ್ಲಿ ಬಂಡಾಯದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಅದು ಆಡಳಿತದ ಮೇಲೆ ಹೇಗೆ ಪರಿಣಾಮ ಬೀರುತ್ತದೆಯೇ ಎಂಬುದು ಮುಂದೆ ಗೊತ್ತಾಗುತ್ತದೆ. ವಿಧಾನಸಭೆ ಅಧಿವೇಶನ ಮುಗಿಯಲಿ, ನಂತರ ಏನಾಗುತ್ತದೆ ಎಂಬುದನ್ನು ನೀವೇ ನೋಡುತ್ತೀರಿ. ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡಿದರೆ ನಮಗೇನು. » ನಾಲ್ಕನೇ ಪುಟದಲ್ಲಿ

> **ಬರ ಪರಿಸ್ಥಿತಿ ಇರುವುದರಿಂದ ಬೆಳೆ ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರ್ಕಾರ ರೈತರ ಸಾಲ ಮನ್ನಾ ಮಾಡಬೇಕು. ಬೇಕಾದರೆ ಸರ್ಕಾರವೇ ಸಾಲ ಮಾಡಿಯಾದರೂ ಪರಿಹಾರ ನೀಡಬೇಕು. ಕಳೆದ ವರ್ಷದ ಬೆಳೆ ವಿಮೆ ಹಣವೂ ಇನ್ನೂ ರೈತರಿಗೆ ಸಿಕ್ಕಿಲ್ಲ. ಈ ಸರ್ಕಾರದಲ್ಲಿ ಹಣವೇ ಇಲ್ಲ. ಏನು ಮಾಡುತ್ತಾರೋ ಗೊತ್ತಿಲ್ಲ ರೈತರ ನೆರವಿಗೆ ಸರ್ಕಾರ ಬರಬೇಕು.**
> **-ಎ.ಮಂಜು, ಮಾಜಿ ಸಚಿವ**

## ಇಂದು ಸಚಿವ ಕೆ.ಎಂ.ಶಿವಲಿಂಗೇಗೌಡ ಜಿಲ್ಲಾ ಪ್ರವಾಸ

**ಹಾಸನ:** ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿ, ಅತಿವೃಷ್ಟಿ ಹಾಗು ಬರ ಪರಿಸ್ಥಿತಿ ಅಧ್ಯಯನಕ್ಕಾಗಿ ಜಿಲ್ಲಾ ಉಸ್ತುವಾರಿ ಜವಾಬ್ದಾರಿ ವಹಿಸಿಕೊಂಡಿರುವ ಕೆ.ಎಂ. ಶಿವಲಿಂಗೇಗೌಡ ಅವರು ಬುಧವಾರ ಜಿಲ್ಲೆಗೆ ಆಗಮಿಸಿ ಪ್ರವಾಸ ಕೈಗೊಳ್ಳಲಿದ್ದಾರೆ.

ಬುಧವಾರ ಬೆಳಿಗ್ಗೆ ಬೆಂಗಳೂರಿನಿಂದ ನೇರವಾಗಿ ಹಿರೀಸಾವೆಗೆ ಆಗಮಿಸಿ, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ ತಾಲ್ಲೂಕಿನ ವಿವಿಧ ಭಾಗಗಳಿಗೆ ಭೇಟಿ ನೀಡಿ ಮಳೆಹಾನಿ ಮತ್ತು ಬರಗಾಲ ಪರಿಸ್ಥಿತಿ ಅಧ್ಯಯನದ ಬಳಿಕ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

# ಜೆಡಿಎಸ್ ನಾಯಕರ ಹಣಿಯಲು ಹೊಸ ಸಂಪುಟ ರಚನೆ

## ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಆರೋಪ

• ಪ್ರಜೋದಯ ವರದಿ

**ಸಕಲೇಶಪುರ:** ರಾಜ್ಯ ಸಚಿವರ ನೂತನ ಪಟ್ಟಿಯನ್ನು ಗಮನಿಸಿದರೆ, ಜೆಡಿಎಸ್‌ನಲ್ಲಿದ್ದ ಹಲವು ನಾಯಕರು ಹಾಗು ಕಾರ್ಯಕರ್ತರನ್ನು ಗಮನದಲ್ಲಿಟ್ಟುಕೊಂಡೇ ಸಂಪುಟ ರಚಿಸಿರುವಂತೆ ಕಾಣುತ್ತಿದೆ ಎಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಆರೋಪಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡು ತಿಂಗಳ ವಿಳಂಬದ ಬಳಿಕ ಕಾಂಗ್ರೆಸ್ ಹೈಕಮಾಂಡ್ ಸಚಿವ ಸಂಪುಟವನ್ನು ರಚಿಸಿದೆ. ಅದರಲ್ಲಿ ಜೆಡಿಎಸ್ ಹಾಗು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ರಾಜಕೀಯವಾಗಿ ಹಣಿಯುವ ಉದ್ದೇಶವೇ ಇದರ ಹಿಂದೆ ಇರುವಂತೆ ಭಾಸವಾಗುತ್ತದೆಂದು ಆರೋಪಿಸಿದರು.



ಸಚಿವ ಸಂಪುಟದಲ್ಲಿ ಆರೋಪ ಎದುರಿಸುತ್ತಿರುವವರಿಗೆ ಅವಕಾಶ ನೀಡಲಾಗಿದೆ. ಸಚಿವ ಬಿ.ನಾಗೇಂದ್ರ ವಿರುದ್ಧದ ಪ್ರಕರಣ ಇನ್ನೂ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಅವರು ಆರೋಪಮುಕ್ತರಾಗಿಲ್ಲ. ಇಂತಹ ಸಂದರ್ಭದಲ್ಲಿ ಅವರಿಗೆ ಮತ್ತೆ ಸಚಿವ ಸ್ಥಾನ ನೀಡಿರುವುದು ಸಮಂಜಸವಲ್ಲ. ಮಹಿಳೆಯರಿಗೆ ಸಚಿವ ಸಂಪುಟದಲ್ಲಿ ಅವಕಾಶ ನೀಡದಿರುವುದು ಬೇಸರದ ಸಂಗತಿ. » ನಾಲ್ಕನೇ ಪುಟದಲ್ಲಿ

> **ಮಲೆನಾಡು ಭಾಗದಲ್ಲಿ ಕಾಡಾನೆ ಹಾವಳಿ ಮುಂದುವರಿದಿದ್ದರೂ ಸರ್ಕಾರ ಸಮರ್ಪಕ ಕ್ರಮ ಕೈಗೊಂಡಿಲ್ಲ. ಜನರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ತಕ್ಷಣವೇ ಗಮನಹರಿಸಬೇಕು.**
> **-ಹೆಚ್.ಕೆ.ಕುಮಾರಸ್ವಾಮಿ, ಮಾಜಿ ಸಚಿವ**

## ಸಾರ್ವಜನಿಕರಿಗೆ ತೊಂದರೆಯಾಗದಂತೆ ಯೋಜನೆ ಜಾರಿ

• ಪ್ರಜೋದಯ ವರದಿ



**ಸಕಲೇಶಪುರ:** ಸರ್ಕಾರದ ಯೋಜನೆಗಳು ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕು ಹಾಗು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೇವೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಒದಗಿಸಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಅಧಿಕಾರಿಗಳಿಗೆ ಸೂಚಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಕಾರ್ಯನಿರ್ವಹಣೆಯನ್ನು ಪರಿಶೀಲಿಸಿದರು.

ಮಳೆಗಾಲದ ಹಿನ್ನಲೆ ತಾಲ್ಲೂಕಿನ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಕಳೆದ ಒಂದು ವಾರದಿಂದ ಈ ಕುರಿತು ನಿರಂತರ ಪರಿಶೀಲನೆ ನಡೆಸಲಾಗುತ್ತಿದೆ. ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಪಿಡಿಒಗಳ ಕೊರತೆಯಿಂದ ಒಬ್ಬರೇ ಎರಡು ಅಥವಾ ಮೂರು ಪಂಚಾಯಿತಿಗಳ ಜವಾಬ್ದಾರಿ ನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದ್ದು, ಈ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ ಎಂದರು.

ತಾಲ್ಲೂಕು ಪಂಚಾಯಿತಿ ಆಸ್ತಿಗಳ ಸಂರಕ್ಷಣೆ, ಸಾರ್ವಜನಿಕರ ಹಿತಾಸಕ್ತಿ ಹಾಗು ವಿವಿಧ ಇಲಾಖೆಗಳ ಜವಾಬ್ದಾರಿಗಳ ಕುರಿತು ಸಭೆಯಲ್ಲಿ ಸಮಗ್ರ ಪರಿಶೀಲನೆ ನಡೆಸಲಾಯಿತು. ಹೊಸದಾಗಿ ಜಾರಿಯಾಗಿರುವ ಮಾರ್ಗಸೂಚಿಗಳ ಅನ್ವಯ ಕೈಗೆತ್ತಿಕೊಳ್ಳಬಹುದಾದ ಅಭಿವೃದ್ಧಿ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಯಿತು ಎಂದು ಹೇಳಿದರು.

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಮನೆಗಳ ಮಂಜೂರಾತಿ ಹಾಗು ಅನುಷ್ಠಾನಕ್ಕೆ ಸಂಬಂಧಿಸಿದ » ನಾಲ್ಕನೇ ಪುಟದಲ್ಲಿ

## ಜಿಲ್ಲೆಯ ಅಭಿವೃದ್ಧಿ ಜೊತೆ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಒತ್ತು ನೀಡಬೇಕಾದ ಹೊಣೆಗಾರಿಕೆ

# ಶಿವಲಿಂಗೇಗೌಡ ಮೇಲೆ ನಿರೀಕ್ಷೆಗಳ ಜೊತೆಗೆ ಸಾಕಷ್ಟು ಸವಾಲು

**-ಕೆ.ಪಿ.ಸಾಗರ್ ರಾಜು**

• ಪ್ರಜೋದಯ ವರದಿ

**ಹಾಸನ:** ಬದಲಾದ ರಾಜಕೀಯ ಸನ್ನಿವೇಶದಲ್ಲಿ ತಾವು ಬೆಳೆದ ಪ್ರಾದೇಶಿಕ ಪಕ್ಷವನ್ನು ತೊರೆದು, ರಾಷ್ಟ್ರೀಯ ಪಕ್ಷ ಸೇರಿ ಶಾಸಕರಾಗಿ ಸಚಿವ ಸ್ಥಾನವನ್ನೂ ಗಿಟ್ಟಿಸಿಕೊಂಡಿರುವ ಕೆ.ಎಂ. ಶಿವಲಿಂಗೇಗೌಡ ಅವರ ಮೇಲೆ ಹಲವು ನಿರೀಕ್ಷೆಗಳ ಜೊತೆಗೆ ಸಾಕಷ್ಟು ಸವಾಲುಗಳು ಎದುರಿಗಿವೆ.

ಜಿಲ್ಲೆಯ ಶಾಸಕರೇ ಜಿಲ್ಲಾ ಉಸ್ತುವಾರಿ ಸಚಿವರಾಗಿರುವುದರಿಂದ ಜನರ ನಿರೀಕ್ಷೆಗಳು ಸಹಜ ವಾಗಿಯೇ ಹೆಚ್ಚಿವೆ. ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಯೋಜನೆಗಳು, ರೈತರ ಸಂಕಷ್ಟ, ಮೂಲಸೌಕರ್ಯಗಳ ಕೊರತೆ, ಪ್ರವಾಸೋದ್ಯಮದ ಅಭಿವೃದ್ಧಿ ಹಾಗು ಅರಣ್ಯ ಪ್ರದೇಶಗಳ ಸಮಸ್ಯೆಗಳಿಗೆ ಸರ್ಕಾರದ ಮಟ್ಟದಲ್ಲಿ ಸ್ಪಂದನೆ ದೊರಕಿಸುವ ಹೊಣೆ ಶಿವಲಿಂಗೇಗೌಡ ಅವರ ಹೆಗಲಿಗೇರಿದೆ.

ಸಚಿವರಾಗಲೇಬೇಕೆಂಬ ಶಿವಲಿಂಗೇಗೌಡ ಅವರ ಬಹುದಿನಗಳ ಕನಸು ಕಾಂಗ್ರೆಸ್ ಸರ್ಕಾರದಲ್ಲಿ ಈಡೇರಿದೆ. ಅದರೊಂದಿಗೆ ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಹೊಣೆಗಾರಿಕೆಯೂ ಅವರ ಹೆಗಲೇರಿದೆ. ಹೀಗಾಗಿ ಜಿಲ್ಲೆಯ ಅಭಿವೃದ್ಧಿಯ ಜೊತೆಗೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಗೊಳಿಸುವುದು, ತಾವು ತೊರೆದು ಬಂದಿರುವ ಜೆಡಿಎಸ್ ಪಕ್ಷವನ್ನು ಎದುರಿಸುವ ರಾಜಕೀಯ ಸವಾಲು ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಎದುರಾಗಲಿದೆ.



ಜನರು ಭರವಸೆಗಳಿಗಿಂತ ಫಲಿತಾಂಶಗಳನ್ನು ನಿರೀಕ್ಷಿಸುತ್ತಿದ್ದಾರೆ. ಆಡಳಿತದ ವೇಗ, ಅಧಿಕಾರಿಗಳ ಸಮನ್ವಯ ಮತ್ತು ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಸಾಮರ್ಥ್ಯವೇ ಕೆ.ಎಂ.ಶಿವಲಿಂಗೇಗೌಡರ ಸಚಿವ ಅವಧಿಯ ಯಶಸ್ಸನ್ನು ನಿರ್ಧರಿಸಲಿದೆ. ರೈತರ ಸಮಸ್ಯೆಗಳು, ನೀರಾವರಿ, ಪ್ರವಾಸೋದ್ಯಮ, ಕೈಗಾರಿಕೆ, ನಗರಾಭಿವೃದ್ಧಿ, ಅರಣ್ಯ ಮಾನವ ಸಂಘರ್ಷ ಮತ್ತು ಉದ್ಯೋಗ ಸೃಷ್ಟಿಯಂತಹ ಹಲವು ಕ್ಷೇತ್ರಗಳಲ್ಲಿ ಸ್ಪಷ್ಟ ಪ್ರಗತಿ ಸಾಧಿಸುವುದು ಹೊಸ ಸಚಿವರ ಮುಂದಿರುವ ಬಹುದೊಡ್ಡ ಸವಾಲಾಗಿದೆ.

### ರೈತರು, ತೆಂಗು ಬೆಳೆಗಾರರಿಂದ ಅಪಾರ ನಿರೀಕ್ಷೆ

ಜಿಲ್ಲೆಯ ಆರ್ಥಿಕತೆಯ ಪ್ರಮುಖ ಆಧಾರ ಕೃಷಿ. ಆದರೆ, ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯ, ಬೆಳೆ ರೋಗಗಳು ಮತ್ತು ಮಾರುಕಟ್ಟೆ ಅಸ್ಥಿರತೆಯಿಂದ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಮೆಕ್ಕೆಜೋಳಕ್ಕೆ ಹರಡಿರುವ ಬಿಳಿಸುಳಿ ರೋಗ, ಆಲೂಗೆಡ್ಡೆ ಬೆಳೆ ಕುಸಿತ, ಕಾಫಿ ಮತ್ತು ಕಳುಮೆಣಸು ಬೆಳೆ ಹಾನಿ, ತೆಂಗಿನಲ್ಲಿ ನುಸಿ ಕೀಟದ ಹಾವಳಿ ರೈತರ ಆತಂಕ ಹೆಚ್ಚಿಸಿವೆ.

ಅರಸೀಕೆರೆ, ಚನ್ನರಾಯಪಟ್ಟಣ, ಹಾಸನ ಸೇರಿ ವಿವಿಧೆಡೆ ತೆಂಗಿನ ಬೆಳೆ ಹಲವು ರೀತಿಯ ರೋಗಗಳಿಗೆ ತುತ್ತಾಗಿ ತೆಂಗು ಬೆಳೆಗಾರರು ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಶಾಸಕರಾಗಿದ್ದ ಅವಧಿಯಲ್ಲಿ ಈ ಬಗ್ಗೆ ಹಲವು ಬಾರಿ ಧ್ವನಿ ಎತ್ತಿದ್ದಾರೆ. ಆದರೀಗ ಸಚಿವರಾಗಿರುವುದರಿಂದ ಈ ಬಗ್ಗೆ ಹೆಚ್ಚಿನ ಒತ್ತು ನೀಡಿ, ಸರ್ಕಾರ ಮಟ್ಟದಿಂದಲೇ ನೆರವು ಒದಗಿಸಬೇಕಾದ ಹೊಣೆಗಾರಿಕೆ ಶಿವಲಿಂಗೇಗೌಡ ಅವರ ಮೇಲಿದೆ.

### ಕಾಂಗ್ರೆಸ್ ಸಂಘಟನೆ, ಸಚಿವರಿಗೆ ಪರೀಕ್ಷೆ

ಸಾಂಪ್ರದಾಯಿಕವಾಗಿ ಜೆಡಿಎಸ್ ಪ್ರಭಾವ ಹೊಂದಿರುವ ಜಿಲ್ಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾಂಗ್ರೆಸ್ ಸಂಘಟನೆಯನ್ನು ಬಲಪಡಿಸುವುದು ಶಿವಲಿಂಗೇಗೌಡ ಅವರಿಗೆ ಮತ್ತೊಂದು ಪ್ರಮುಖ ಜವಾಬ್ದಾರಿಯಾಗಿದೆ. ಸ್ಥಳೀಯ ಮಟ್ಟದ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರನ್ನು ಒಗ್ಗೂಡಿಸುವುದು, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಘಟನೆಯನ್ನು ಸಜ್ಜುಗೊಳಿಸುವುದು ರಾಜಕೀಯವಾಗಿ ನಿರ್ಣಾಯಕವಾಗಲಿದೆ.

ಆಡಳಿತದ ಸಾಧನೆ ಮತ್ತು ಅಭಿವೃದ್ಧಿಯ ಫಲಿತಾಂಶಗಳು ಕಾಂಗ್ರೆಸ್‌ನ ರಾಜಕೀಯ ಬಲ ವರ್ಧನೆಗೂ ನೇರವಾಗಿ ಸಂಬಂಧಿಸುವುದರಿಂದ, ಸಚಿವರ ಕಾರ್ಯವೈಖರಿಯ ಮೇಲೆ ಪಕ್ಷದ ನಿರೀಕ್ಷೆಯೂ ಹೆಚ್ಚಿದೆ.

**ಜಿಲ್ಲೆಯ ಅಭಿವೃದ್ಧಿಗೆ ಬೇಕಿದೆ ಹೊಸ ದಿಕ್ಕು**

ಜಿಲ್ಲೆಯಲ್ಲಿ ಹಲವು ಯೋಜನೆಗಳು ವರ್ಷಗಳಿಂದ ಚರ್ಚೆಯಲ್ಲಿದ್ದರೂ, ನಿರೀಕ್ಷಿತ ವೇಗದಲ್ಲಿ ಪೂರ್ಣಗೊಂಡಿಲ್ಲ. ಎತ್ತಿನಹೊಳೆ ಯೋಜನೆ ಇನ್ನೂ ಭೂಸ್ವಾಧೀನ, ಪರಿಹಾರ ಹಾಗು ಕಾಮಗಾರಿ ವಿಳಂಬದ ಸಮಸ್ಯೆಗಳಿಂದ ಬಳಲುತ್ತಿದೆ. ಯೋಜನೆಯಿಂದ ಭೂಮಿ ಕಳೆದುಕೊಂಡ ರೈತರು ಸಮರ್ಪಕ ಪರಿಹಾರ ಮತ್ತು ಪುನರ್ವಸತಿ ಕೋರಿ ಹಲವು » ನಾಲ್ಕನೇ ಪುಟದಲ್ಲಿ

> ದೇಶದ ಮೂಲೆಮೂಲೆಗಳಲ್ಲಿ ಲಕ್ಷಾಂತರ ಜನರು ಇದೇ ಘೋಷಣೆಯನ್ನು ಕೂಗುತ್ತಾ ಬ್ರಿಟಿಷರ ವಿರುದ್ಧ ಪ್ರತಿಭಟಿಸಿದರು. ಸಾವಿರಾರು ಯುವಕರು ಜೈಲು ಸೇರಿದರು, ಅನೇಕ ಕ್ರಾಂತಿಕಾರರು ಗಲ್ಲಿಗೇರಿದ ಕ್ಷಣದಲ್ಲಿ ಅವರ ತುಟಿಗಳಲ್ಲಿ ಮೊಳಗಿದ್ದು ವಂದೇ ಮಾತರಂ. ಸ್ವಾತಂತ್ರ್ಯ ದೊರೆತು ಸುಮಾರು ಎಂಟು ದಶಕಗಳು ಕಳೆದ ನಂತರವೂ ಈ ಗೀತೆಯ ಮಹತ್ವ ಕಡಿಮೆಯಾಗಿಲ್ಲ.




# ಸ್ವಾತಂತ್ರ್ಯದ ಶಾಶ್ವತ ಧ್ವನಿ ವಂದೇ ಮಾತರಂ

ವೀಕೆಂಡ್ ವಿತ್ ಮೋಹನ್

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಓದಿದಾಗ ಕೆಲವು ಪದಗಳು ಕೇವಲ ಅಕ್ಷರಗಳಾಗಿ ಉಳಿಯುವುದಿಲ್ಲ; ಅವು ಒಂದು ಜನಾಂಗದ ಆತ್ಮಗೌರವ, ಸ್ವಾತಂತ್ರ್ಯದ ಹಂಬಲ ಮತ್ತು ದೇಶಭಕ್ತಿಯ ಶಾಶ್ವತ ಸಂಕೇತಗಳಾಗಿ ರೂಪುಗೊಳ್ಳುತ್ತವೆ. ಅಂತಹ ಪದಗಳಲ್ಲಿ ವಂದೇ ಮಾತರಂ ಅತ್ಯಂತ ಮಹತ್ವದ್ದಾಗಿದೆ. ಇದು ಕೇವಲ ಒಂದು ಗೀತೆಯಲ್ಲ; ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಭಾರತೀಯರನ್ನು ಒಗ್ಗೂಡಿಸಿದ ರಾಷ್ಟ್ರೀಯ ಮಂತ್ರ, ಸ್ವಾತಂತ್ರ್ಯ ಹೋರಾಟಗಾರರ ಹೃದಯದ ಧ್ವನಿ ಹಾಗೂ ಮಾತೃಭೂಮಿಯ ಮೇಲಿನ ಅಚಲ ಪ್ರೀತಿಯ ಪ್ರತೀಕವಾಗಿದೆ.

ದೇಶದ ಮೂಲೆಮೂಲೆಗಳಲ್ಲಿ ಲಕ್ಷಾಂತರ ಜನರು ಇದೇ ಘೋಷಣೆಯನ್ನು ಕೂಗುತ್ತಾ ಬ್ರಿಟಿಷರ ವಿರುದ್ಧ ಪ್ರತಿಭಟಿಸಿದರು. ಸಾವಿರಾರು ಯುವಕರು ಜೈಲು ಸೇರಿದರು, ಅನೇಕ ಕ್ರಾಂತಿಕಾರರು ಗಲ್ಲಿಗೇರಿದ ಕ್ಷಣದಲ್ಲಿ ಅವರ ತುಟಿಗಳಲ್ಲಿ ಮೊಳಗಿದ್ದು ವಂದೇ ಮಾತರಂ. ಸ್ವಾತಂತ್ರ್ಯ ದೊರೆತು ಸುಮಾರು ಎಂಟು ದಶಕಗಳು ಕಳೆದ ನಂತರವೂ ಈ ಗೀತೆಯ ಮಹತ್ವ ಕಡಿಮೆಯಾಗಿಲ್ಲ. 2026ರಲ್ಲಿ ಭಾರತೀಯ ಸಂಸತ್ತು ರಾಷ್ಟ್ರೀಯ ಗೀತೆ ವಂದೇ ಮಾತರಂಗೆ ರಾಷ್ಟ್ರಗೀತೆಯಷ್ಟೇ ಕಾನೂನು ರಕ್ಷಣೆ ನೀಡುವ ಐತಿಹಾಸಿಕ ತಿದ್ದುಪಡಿ ಅಂಗೀಕರಿಸುವ ಮೂಲಕ ಅದರ ಗೌರವವನ್ನು ಮತ್ತಷ್ಟು ಎತ್ತರಕ್ಕೇರಿಸಿದೆ.

ಬಂಗಾಳದ ಪ್ರಸಿದ್ಧ ಸಾಹಿತಿ, ಕಾದಂಬರಿಕಾರ ಬಂಕಿಮಚಂದ್ರ ಚಟರ್ಜಿ ಅವರು 1875ರಲ್ಲಿ ವಂದೇ ಮಾತರಂ ಗೀತೆಯನ್ನು ರಚಿಸಿದರು. ನಂತರ 1882ರಲ್ಲಿ ಪ್ರಕಟವಾದ ಅವರ ಪ್ರಸಿದ್ಧ ಕಾದಂಬರಿ ಆನಂದಮಠದಲ್ಲಿ ಈ ಗೀತೆಯನ್ನು ಸೇರಿಸಲಾಯಿತು. ಬ್ರಿಟಿಷರ ದಬ್ಬಾಳಿಕೆಯ ಸಂದರ್ಭದಲ್ಲಿ ಬಂಕಿಮಚಂದ್ರರು ಭಾರತವನ್ನು ಜೀವಂತ ಮಾತೃಭೂಮಿಯಾಗಿ ಚಿತ್ರಿಸಿ ಜನರಲ್ಲಿ ರಾಷ್ಟ್ರಪ್ರೇಮವನ್ನು ಮೂಡಿಸುವ ಪ್ರಯತ್ನ ಮಾಡಿದರು. ಸುಜಲಾಂ ಸುಫಲಾಂ ಮಲಯಜ ಶೀತಲಾಂ ಶಸ್ಯ ಶ್ಯಾಮಲಾಂ ಮಾತರಂ ಎಂಬ ಸಾಲುಗಳು ಭಾರತದ ಪ್ರಕೃತಿ, ಕೃಷಿ ಸಂಪತ್ತು, ಸಾಂಸ್ಕೃತಿಕ ವೈಭವ ಮತ್ತು ಮಾತೃಭೂಮಿಯ ಸೌಂದರ್ಯವನ್ನು ಕಾವ್ಯಮಯವಾಗಿ ವರ್ಣಿಸುತ್ತವೆ. ಸಾಹಿತ್ಯದ ದೃಷ್ಟಿಯಿಂದ ಇದು ಶ್ರೇಷ್ಠ ಕೃತಿ ಮಾತ್ರವಲ್ಲ; ಭಾರತೀಯ ರಾಷ್ಟ್ರೀಯತೆಯ ಮೂಲಭೂತ ಚಿಂತನೆಗೆ ಪ್ರೇರಣೆಯಾದ ಗೀತೆ ಎಂಬ ಗೌರವವನ್ನೂ ಪಡೆದಿದೆ.

1896ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಕೋಲ್ಕತ್ತಾ ಅಧಿವೇಶನದಲ್ಲಿ ಮೊಟ್ಟಮೊದಲ ಬಾರಿಗೆ ರವೀಂದ್ರನಾಥ ಟಾಗೋರ್ ವಂದೇ ಮಾತರಂ ಹಾಡಿದರು. ಆ ದಿನದಿಂದಲೇ ಈ ಗೀತೆ ರಾಷ್ಟ್ರ ಚಳುವಳಿಯ ಧ್ವನಿಯಾಯಿತು. ವಿಶೇಷವಾಗಿ 1905ರಲ್ಲಿ ಲಾರ್ಡ್ ಕರ್ಜನ್ ಬಂಗಾಳ ವಿಭಜನೆ ಘೋಷಿಸಿದ ನಂತರ ದೇಶಾದ್ಯಂತ ಉಂಟಾದ ಸ್ವದೇಶಿ ಚಳವಳಿಯಲ್ಲಿ ವಂದೇ ಮಾತರಂ ಪ್ರಮುಖ ಘೋಷಣೆಯಾಗಿ ರೂಪುಗೊಂಡಿತು.

ವಿದ್ಯಾರ್ಥಿಗಳು, ಮಹಿಳೆಯರು, ರೈತರು, ಕಾರ್ಮಿಕರು, ವಕೀಲರು, ವ್ಯಾಪಾರಿಗಳು- ಎಲ್ಲರೂ ಒಂದೇ ಘೋಷಣೆಯೊಂದಿಗೆ ಬೀದಿಗಿಳಿದರು. ಬ್ರಿಟಿಷ್ ಸರಕಾರ ಈ ಘೋಷಣೆಯನ್ನು ಭಯದ ಕಣ್ಣಿನಿಂದ ನೋಡತೊಡಗಿತು. ಅನೇಕ ಕಡೆಗಳಲ್ಲಿ ವಂದೇ ಮಾತರಂ ಘೋಷಣೆ ಕೂಗುವುದನ್ನೇ ನಿಷೇಧಿಸಲಾಯಿತು. ಶಾಲೆಗಳಲ್ಲಿ, ಸಭೆಗಳಲ್ಲಿ, ಮೆರವಣಿಗೆಗಳಲ್ಲಿ ಇದನ್ನು ಹಾಡಿದವರನ್ನು ಬಂಧಿಸಲಾಯಿತು.

ಆದರೆ ಬ್ರಿಟಿಷರ ಲಾಠಿ, ಜೈಲು ಮತ್ತು ಗುಂಡಿನ ದಾಳಿಗಳು ಈ ಘೋಷಣೆಯನ್ನು ಮೌನಗೊಳಿಸಲಿಲ್ಲ. ಅದು ದೇಶದ ಸ್ವಾತಂತ್ರ್ಯ ಸಂಕಲ್ಪದ ಪ್ರತೀಕವಾಗಿ ಇನ್ನಷ್ಟು ಬಲಿಷ್ಠವಾಯಿತು. ಭಾರತದ ಅನೇಕ ಮಹಾನ್ ನಾಯಕರು ವಂದೇ ಮಾತರಂಗೆ ವಿಶೇಷ ಗೌರವ ನೀಡಿದ್ದರು. ಶ್ರೀ ಅರವಿಂದರು ಈ ಗೀತೆಯನ್ನು ಭಾರತದ ರಾಷ್ಟ್ರೀಯ ಪುನರುತ್ಥಾನದ ಆತ್ಮವೆಂದು ಬಣ್ಣಿಸಿದ್ದರು. ಬಿಪಿನ್ ಚಂದ್ರ ಪಾಲ್, ಲಾಲಾ ಲಜಪತ್ ರಾಯ್,



ಬಾಲಗಂಗಾಧರ ತಿಲಕ್, ಸುಭಾಷ್ ಚಂದ್ರ ಬೋಸ್ ಸೇರಿದಂತೆ ಅನೇಕ ನಾಯಕರು ಈ ಗೀತೆಯನ್ನು ದೇಶಭಕ್ತಿಯ ಸಂಕೇತವಾಗಿ ಬಳಸಿದರು.

ಕ್ರಾಂತಿಕಾರರ ಗುಪ್ತ ಸಭೆಗಳಲ್ಲಿ, ಬ್ರಿಟಿಷರ ವಿರುದ್ಧದ ಪ್ರತಿಭಟನೆಗಳಲ್ಲಿ ಮತ್ತು ಜೈಲುಗಳ ಒಳಗೂ ವಂದೇ ಮಾತರಂ ಮೊಳಗುತ್ತಿತ್ತು. ಭಾರತದ ಸ್ವಾತಂತ್ರ್ಯ ಚಳವಳಿಯ ಚಿತ್ರಣವನ್ನು ವಂದೇ ಮಾತರಂ ಇಲ್ಲದೆ ಪೂರ್ಣಗೊಳಿಸಲಾಗುವುದಿಲ್ಲ.

ಸ್ವಾತಂತ್ರ್ಯ ಬಂದ ನಂತರ ರಾಷ್ಟ್ರಗೀತೆ ಯಾವುದು ಎಂಬ ಪ್ರಶ್ನೆ ಸಂವಿಧಾನ ಸಭೆಯಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಯಿತು. ಒಂದು ಕಡೆ ವಂದೇ ಮಾತರಂಗೆ ಅಪಾರ ಜನಬೆಂಬಲವಿದ್ದರೆ, ಮತ್ತೊಂದೆಡೆ ಜನ ಗಣ ಮನ ಆಗಲೇ ಅಧಿಕೃತ ಸಮಾರಂಭಗಳಲ್ಲಿ ಬಳಕೆಯಾಗುತ್ತಿತ್ತು. ಕೆಲವು ಸದಸ್ಯರು ವಂದೇ ಮಾತರಂನ ಸಂಪೂರ್ಣ ಗೀತೆಯಲ್ಲಿ ದೇವಿಯ ರೂಪಕ ಇರುವುದರಿಂದ ಕೆಲವು ಸಮುದಾಯಗಳಲ್ಲಿ ಭಿನ್ನಾಭಿಪ್ರಾಯಗಳಿವೆ ಎಂದು ಅಭಿಪ್ರಾಯಪಟ್ಟರು.

ಅಂತಿಮವಾಗಿ 1950ರ ಜನವರಿ 24ರಂದು ಜನ ಗಣ ಮನ ರಾಷ್ಟ್ರಗೀತೆಯಾಗಿದ್ದು, ವಂದೇ ಮಾತರಂನ ಮೊದಲ ಎರಡು ಚರಣಗಳಿಗೆ ರಾಷ್ಟ್ರಗೀತೆಯಷ್ಟೇ ಗೌರವದೊಂದಿಗೆ ರಾಷ್ಟ್ರೀಯ ಗೀತೆಯ ಸ್ಥಾನಮಾನ ನೀಡಲಾಗುವುದು ಎಂದು ಘೋಷಿಸಲಾಯಿತು.

ಕಾಲಕ್ರಮೇಣ ವಂದೇ ಮಾತರಂ ಕುರಿತ ವಿವಾದಗಳು ರಾಜಕೀಯ ಸ್ವರೂಪ ಪಡೆಯತೊಡಗಿದವು. ಕೆಲವು ಮುಸ್ಲಿಂ ಸಂಘಟನೆಗಳು ಗೀತೆಯ ಮುಂದಿನ ಚರಣಗಳಲ್ಲಿ ಭಾರತಮಾತೆಯನ್ನು ದುರ್ಗಾ ದೇವಿಯ ರೂಪದಲ್ಲಿ ಚಿತ್ರಿಸಿರುವುದರಿಂದ ಅದನ್ನು ಧಾರ್ಮಿಕವಾಗಿ ಹಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟವು. ಆದರೆ ರಾಷ್ಟ್ರಗೌರವ ಮತ್ತು ಧಾರ್ಮಿಕ ಸ್ವಾತಂತ್ರ್ಯದ ನಡುವಿನ ಸಮತೋಲನವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಸರಕಾರ ಹಾಗೂ ಸಾರ್ವಜನಿಕ ಸಂಸ್ಥೆಗಳು ಸಾಮಾನ್ಯವಾಗಿ ಮೊದಲ ಎರಡು ಚರಣಗಳನ್ನೇ ಬಳಸುವ ಸಂಪ್ರದಾಯವನ್ನು ಅನುಸರಿಸಿದವು.

ಇದುವರೆಗೆ ರಾಷ್ಟ್ರೀಯ ಧ್ವಜ, ರಾಷ್ಟ್ರಗೀತೆ ಮತ್ತು ಭಾರತದ ಸಂವಿಧಾನಕ್ಕೆ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆಗಟ್ಟುವಿಕೆ ಕಾಯ್ದೆ 1971 ಅಡಿಯಲ್ಲಿ ಸ್ಪಷ್ಟ ಕಾನೂನು ರಕ್ಷಣೆ ಇತ್ತು. ಆದರೆ ರಾಷ್ಟ್ರೀಯ ಗೀತೆ ವಂದೇ ಮಾತರಂಗೆ ಅದೇ ರೀತಿಯ ಶಾಸನಬದ್ಧ ರಕ್ಷಣೆ ಇರಲಿಲ್ಲ. ಈ ಕಾನೂನು ಅಂತರವನ್ನು ನಿವಾರಿಸುವ ಉದ್ದೇಶದಿಂದ ಕೇಂದ್ರ ಸರಕಾರ 2026ರಲ್ಲಿ ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆಗಟ್ಟುವಿಕೆ (ತಿದ್ದುಪಡಿ) ಮಸೂದೆ, 2026 ಅನ್ನು ಸಂಸತ್ತಿನಲ್ಲಿ ಮಂಡಿಸಿತು.

2026ರ ಜುಲೈ ತಿಂಗಳಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಸದನಗಳು ಈ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿದವು. ಈ ತಿದ್ದುಪಡಿಯ ಪ್ರಕಾರ, ರಾಷ್ಟ್ರೀಯ ಗೀತೆಯಾದ ವಂದೇ ಮಾತರಂಗೆ ರಾಷ್ಟ್ರಗೀತೆಯಷ್ಟೇ ಕಾನೂನು ರಕ್ಷಣೆ ದೊರೆಯಲಿದೆ. ಉದ್ದೇಶಪೂರ್ವಕವಾಗಿ ರಾಷ್ಟ್ರೀಯ ಗೀತೆಯ ಗಾಯನವನ್ನು ತಡೆಯುವುದು, ಅಡ್ಡಿಪಡಿಸುವುದು ಅಥವಾ ಅವಮಾನಿಸುವುದು ಶಿಕ್ಷಾರ್ಹ ಕೃತ್ಯವಾಗಲಿದೆ. ಈ ಬೆಳವಣಿಗೆ ಕೇವಲ ಒಂದು ಗೀತೆಯ ಕುರಿತಲ್ಲ; ಭಾರತದ ರಾಷ್ಟ್ರೀಯ ಸಂಕೇತಗಳ ಕುರಿತು ಸಂಸತ್ತಿನ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ.

ರಾಷ್ಟ್ರಧ್ವಜ, ರಾಷ್ಟ್ರಲಾಂಛನ, ರಾಷ್ಟ್ರಗೀತೆ ಹಾಗೂ ರಾಷ್ಟ್ರೀಯ ಗೀತೆ- ಇವೆಲ್ಲವೂ ಭಾರತದ ಐತಿಹಾಸಿಕ ಪಯಣದ ಅವಿಭಾಜ್ಯ ಅಂಗಗಳಾಗಿವೆ. ಅವುಗಳಿಗೆ ಗೌರವ ತೋರಿಸುವುದು ಕೇವಲ ಕಾನೂನಿನ ವಿಷಯವಲ್ಲ; ಅದು ನಾಗರಿಕರ ಸಾಂವಿಧಾನಿಕ ಕರ್ತವ್ಯವೂ ಹೌದು.

ಸಂವಿಧಾನದ 51(ಎ) ವಿಧಿಯು ಪ್ರತಿಯೊಬ್ಬ ಭಾರತೀಯ ನಾಗರಿಕನು ರಾಷ್ಟ್ರಧ್ವಜ, ರಾಷ್ಟ್ರಗೀತೆ ಹಾಗೂ ದೇಶದ ಆದರ್ಶಗಳಿಗೆ ಗೌರವ ತೋರಬೇಕೆಂದು ಹೇಳುತ್ತದೆ. ಹೊಸ ತಿದ್ದುಪಡಿಯ ಮೂಲಕ ರಾಷ್ಟ್ರೀಯ ಗೀತೆಗೂ ಇದೇ ಗೌರವದ ಚೌಕಟ್ಟಿನಲ್ಲಿ ಮತ್ತಷ್ಟು ಬಲವಾದ ಸ್ಥಾನ ದೊರೆತಿದೆ. ಈ ಬೆಳವಣಿಗೆ ರಾಷ್ಟ್ರೀಯ ಏಕತೆ ಮತ್ತು ಐತಿಹಾಸಿಕ ಪರಂಪರೆಯ ಸಂರಕ್ಷಣೆಯ ದೃಷ್ಟಿಯಿಂದ ಮಹತ್ವದ್ದಾಗಿದೆ.

ಇಂದು ವಂದೇ ಮಾತರಂ ಭಾರತದ ಪ್ರತಿಯೊಂದು ಪೀಳಿಗೆಗೂ ಹೊಸ ಅರ್ಥವನ್ನು ನೀಡುತ್ತಿದೆ. ಸ್ವಾತಂತ್ರ್ಯ ಹೋರಾಟಗಾರರಿಗೆ ಅದು ಬ್ರಿಟಿಷ್ ಆಳ್ವಿಕೆಯಿಂದ ಮುಕ್ತಿಯ ಘೋಷಣೆಯಾಗಿದ್ದರೆ, ಇಂದಿನ ಯುವಜನತೆಗೆ ಅದು ದೇಶಭಕ್ತಿ, ರಾಷ್ಟ್ರೀಯ ಏಕತೆ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯ ನೆನಪಾಗಿದೆ. ದೇಶದ ವಿವಿಧ ಭಾಷೆಗಳು, ಧರ್ಮಗಳು ಮತ್ತು ಸಂಸ್ಕೃತಿಗಳನ್ನು ಒಂದೇ ಮಾತೃಭೂಮಿಯ ಭಾವನೆಯಡಿ ಒಗ್ಗೂಡಿಸುವ ಸಾಮರ್ಥ್ಯ ಈ ಗೀತೆಯಲ್ಲಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವ ಭಾರತದ ಪರಂಪರೆಯಲ್ಲಿ ವಂದೇ ಮಾತರಂ ವಿಶೇಷ ಸ್ಥಾನ ಹೊಂದಿದೆ.

ಇತಿಹಾಸದಲ್ಲಿ ಹುಟ್ಟಿದ ಈ ಗೀತೆ, ಸ್ವಾತಂತ್ರ್ಯ ಚಳವಳಿಯಲ್ಲಿ ಬೆಳೆಯಿತು, ಸಂವಿಧಾನ ಸಭೆಯಲ್ಲಿ ಗೌರವದ ಸ್ಥಾನ ಪಡೆದು, ಈಗ ಸಂಸತ್ತಿನ ಹೊಸ ಕಾನೂನು ರಕ್ಷಣೆಯೊಂದಿಗೆ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ತಲುಪಿದೆ. ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಅನೇಕ ಹೋರಾಟಗಾರರ ತುಟಿಗಳಲ್ಲಿ ಮೊಳಗಿದ್ದ ವಂದೇ ಮಾತರಂ ಎಂಬ ಪದಗಳ ಐತಿಹಾಸಿಕ ಮಹತ್ವವನ್ನು ನಿರಾಕರಿಸುವುದು ಸಾಧ್ಯವಿಲ್ಲ.

ವಂದೇ ಮಾತರಂ ಕೇವಲ ಒಂದು ಗೀತೆಯಲ್ಲ, ಅದು ಒಂದು ಚಳವಳಿ, ತ್ಯಾಗದ ಸಂಕೇತ. ಒಂದು ರಾಷ್ಟ್ರೀಯ ಸಂಕಲ್ಪ ಮತ್ತು ಒಂದು ಭಾವನೆ. ಮಾತೃಭೂಮಿಯ ಮೇಲಿನ ಪ್ರೀತಿಗೆ ಪದಗಳ ರೂಪ ನೀಡಿದ ಅಮರ ಗೀತೆ. ಹೊಸ ಕಾನೂನು ರಕ್ಷಣೆಯೊಂದಿಗೆ ಈ ಗೀತೆಯ ಗೌರವ ಮತ್ತಷ್ಟು ಗಟ್ಟಿಯಾಗಿರುವುದು ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಸ್ಮರಣೀಯ ಅಧ್ಯಾಯವಾಗಿ ಉಳಿಯಲಿದೆ.

ಮುಂದಿನ ಪೀಳಿಗೆಗಳು ವಂದೇ ಮಾತರಂ ಅನ್ನು ಕೇವಲ ಹಾಡಾಗಿ ಅಲ್ಲ, ಭಾರತದ ಸ್ವಾತಂತ್ರ್ಯದ ಹೋರಾಟ, ರಾಷ್ಟ್ರೀಯ ಏಕತೆಯ ಮೌಲ್ಯ ಮತ್ತು ಮಾತೃಭೂಮಿಯ ಮೇಲಿನ ನಿಸ್ವಾರ್ಥ ಪ್ರೀತಿಯ ಜೀವಂತ ಪರಂಪರೆಯಾಗಿ ನೆನಪಿಸಿಕೊಳ್ಳುವಂತಾಗಲಿ ಎಂಬುದು ಈ ಐತಿಹಾಸಿಕ ಬೆಳವಣಿಗೆಯ ನಿಜವಾದ ಸಂದೇಶ.

**- ಮೋಹನ್** ವಿಶ್ವ



# ದೇವಕಿ ಅಮ್ಮ: ಕೇರಳದ ವನ ಮಾತೆಯ ಸ್ಫೂರ್ತಿದಾಯಕ ಕಥೆ

> ಕೃಷಿ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದ ದೇವಕಿ ಅಮ್ಮನಿಗೆ ಬಾಲ್ಯದಿಂದಲೇ ಗಿಡಮರಗಳ ಬಗ್ಗೆ ಅಪಾರ ಒಲವಿತ್ತು. ಆದರೆ ಕಾಲಿಗೆ ತೀವ್ರವಾಗಿ ಪೆಟ್ಟಾದ ಕಾರಣ ಅವರಿಗೆ ಕೃಷಿ ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಈ ನಿರಾಶೆಯನ್ನು ಮೆಟ್ಟಿ ನಿಲ್ಲಲು, ಅವರು 1980ರ ದಶಕ ದಲ್ಲಿ ತಮ್ಮ ಮನೆಯ ಹಿತ್ತಲಿನಲ್ಲಿದ್ದ ಐದು ಎಕರೆ ಬಂಜರು ಭೂಮಿಯಲ್ಲಿ ಒಂದೊಂದೇ ಸಸಿಗಳನ್ನು ನೆಡಲು ಪ್ರಾರಂಭಿಸಿದರು.

ಒಂದೊಳ್ಳೆ ಮಾತು

92 ವರ್ಷದ ದೇವಕಿ ಅಮ್ಮ ಅವರು, ಕೇವಲ ಒಬ್ಬ ವ್ಯಕ್ತಿ ಮನಸ್ಸು ಮಾಡಿದರೆ ಜಗತ್ತಿನಲ್ಲಿ ಎಂತಹ ಅದ್ಭುತ ಮತ್ತು ಶಾಶ್ವತ ಬದಲಾವಣೆಯನ್ನು ತರಬಹುದು ಎಂಬುದಕ್ಕೆ ಜೀವಂತ ಉದಾಹರಣೆಯಾಗಿದ್ದಾರೆ. ಕೇರಳದ ಆಲಪ್ಪುಳ ಜಿಲ್ಲೆಯ ಮುತ್ತುಕುಲಂ ಎಂಬ ಪುಟ್ಟ ಹಳ್ಳಿಯ ಈ ಅಜ್ಜಿ, ಇಂದು ಕೇರಳದ ಅರಣ್ಯ ಮಾತೆ ಎಂದೇ ಪ್ರಸಿದ್ಧರಾಗಿದ್ದಾರೆ.

ಒಂದು ಕಾಲದಲ್ಲಿ ಸಂಪೂರ್ಣ ಬಂಜರಾಗಿದ್ದ ಭೂಮಿಯನ್ನು ತಮ್ಮ ದಶಕಗಳ ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದಿಂದ ಒಂದು ದಟ್ಟವಾದ ಹಾಗೂ ಸಮೃದ್ಧವಾದ ಕಾಡಾಗಿ ಪರಿವರ್ತಿಸಿದ ಹೆಗ್ಗಳಿಕೆ ಇವರದ್ದು.

ಕೃಷಿ ಹಿನ್ನೆಲೆಯುಳ್ಳ ಕುಟುಂಬದಿಂದ ಬಂದ ದೇವಕಿ ಅಮ್ಮನಿಗೆ ಬಾಲ್ಯದಿಂದಲೇ ಗಿಡಮರಗಳ ಬಗ್ಗೆ ಅಪಾರ ಒಲವಿತ್ತು. ಆದರೆ ಕಾಲಿಗೆ ತೀವ್ರವಾಗಿ ಪೆಟ್ಟಾದ ಕಾರಣ ಅವರಿಗೆ ಕೃಷಿ ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಈ ನಿರಾಶೆಯನ್ನು ಮೆಟ್ಟಿ ನಿಲ್ಲಲು, ಅವರು 1980ರ ದಶಕದಲ್ಲಿ ತಮ್ಮ ಮನೆಯ ಹಿತ್ತಲಿನಲ್ಲಿದ್ದ ಐದು ಎಕರೆ ಬಂಜರು ಭೂಮಿಯಲ್ಲಿ ಒಂದೊಂದೇ ಸಸಿಗಳನ್ನು ನೆಡಲು ಪ್ರಾರಂಭಿಸಿದರು.

ಅಂದು ಅವರು ನೆಟ್ಟ ಆ ಮೊದಲ ಸಸಿಗಳು, ಇಂದು ಒಂದು ಬೃಹತ್ ಹಸಿರು ಸಾಮ್ರಾಜ್ಯವಾಗಿ ಬೆಳೆದು ನಿಂತಿವೆ. ಕೇವಲ ಒಂದು ವೈಯಕ್ತಿಕ ಆಸಕ್ತಿಯಾಗಿ ಶುರುವಾದ ಈ ಕೆಲಸ, ವರ್ಷಗಳು ಉರುಳಿದಂತೆ ಒಂದು ಬೃಹತ್ ಪರಿಸರ ವ್ಯವಸ್ಥೆಯಾಗಿ ಮಾರ್ಪಟ್ಟಿತು. ಇಂದು ದೇವಕಿ ಅಮ್ಮನವರ ಈ ಕಾಡಿನಲ್ಲಿ ಮೂರು ಸಾವಿರಕ್ಕೂ ಹೆಚ್ಚು ಮರಗಳಿವೆ.

ಇಲ್ಲಿ ತೇಗ, ಮಹಾಗನಿ, ಮಾವು, ಹಲಸು, ಮತ್ತು ಪೈನ್ ಮರಗಳಷ್ಟೇ ಅಲ್ಲದೆ, ಔಷಧಿಯ ಗಿಡ ಮೂಲಿಕೆಗಳು ಹಾಗೂ ಅಳಿವಿನಂಚಿನಲ್ಲಿರುವ ಅನೇಕ ಅಪರೂಪದ ಸಸ್ಯ ಪ್ರಭೇದಗಳಿವೆ. ಇದು ಕೇವಲ ಮರಗಳ ತೋಪಲ್ಲ; ನೂರಾರು ಜಾತಿಯ ಪಕ್ಷಿಗಳು, ಚಿಟ್ಟೆಗಳು, ಕೀಟಗಳು ಮತ್ತು ಸಣ್ಣಪುಟ್ಟ ವನ್ಯಜೀವಿಗಳಿಗೆ ಆಶ್ರಯ ನೀಡುವ ಸುರಕ್ಷಿತ ತಾಣವಾಗಿದೆ.

ಪರಿಸರ ಸಂರಕ್ಷಣೆ ಎಂದರೆ ಕೇವಲ ಸರಕಾರ ಅಥವಾ ದೊಡ್ಡ ಸಂಸ್ಥೆಗಳ ಜವಾಬ್ದಾರಿಯಲ್ಲ, ಅದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ ಎಂಬುದನ್ನು ದೇವಕಿ ಅಮ್ಮ ನಿರೂಪಿಸಿದ್ದಾರೆ. ಯಾವುದೇ ಸರಕಾರದ ನೆರವು, ಯಂತ್ರೋಪಕರಣಗಳು ಅಥವಾ ದೊಡ್ಡ ಸಂಸ್ಥೆಗಳ ಆರ್ಥಿಕ ಸಹಾಯವಿಲ್ಲದೆ, ಕೇವಲ ತಮ್ಮ ಸ್ವಂತ ಕೈಯಿಂದ ಪ್ರತಿದಿನ ಗಿಡಗಳಿಗೆ ನೀರು ಹಾಕಿ, ಪೋಷಿಸಿ ಈ ಸಾಧನೆ ಮಾಡಿದ್ದಾರೆ.

ಈಗ ಅವರಿಗೆ 92 ವರ್ಷ ವಯಸ್ಸಾಗಿದ್ದರೂ, ಅವರ ಉತ್ಸಾಹ ಮತ್ತು ಪ್ರಕೃತಿಯ ಮೇಲಿನ ಪ್ರೇಮ ಕಿಂಚಿತ್ತೂ ಕಡಿಮೆಯಾಗಿಲ್ಲ. ಅವರ ಈ ನಿಸ್ವಾರ್ಥ ಪರಿಸರ ಸೇವೆಯನ್ನು ಗುರುತಿಸಿ ಭಾರತ ಸರಕಾರವು ಅವರಿಗೆ ನಾರಿ ಶಕ್ತಿ ಪುರಸ್ಕಾರ (2018) ಸೇರಿದಂತೆ ಅನೇಕ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

ದೇವಕಿ ಅಮ್ಮನವರ ಪರಂಪರೆಯು ಅವರು ನೆಟ್ಟ ಪ್ರತಿಯೊಂದು ಮರದಲ್ಲೂ ಎದ್ದು ಕಾಣುತ್ತದೆ. ಅವರು ಸೃಷ್ಟಿಸಿದ ಈ ಕಾಡು ಮುಂಬರುವ ಅನೇಕ ತಲೆಮಾರುಗಳಿಗೆ ಶುದ್ಧ ಗಾಳಿ, ನೆರಳು ಮತ್ತು ಜೀವಸಂಕುಲಕ್ಕೆ ಆಶ್ರಯವನ್ನು ನೀಡುತ್ತದೆ. ಪರಿಸರ ನಾಶದ ಬಗ್ಗೆ ಕೇವಲ ಮಾತನಾಡುತ್ತಾ ಕೂರುವ ಬದಲು, ಕಾರ್ಯರೂಪಕ್ಕೆ ಇಳಿದರೆ ಏನನ್ನು ಸಾಧಿಸಬಹುದು ಎನ್ನುವುದಕ್ಕೆ ದೇವಕಿ ಅಮ್ಮನವರ ಈ ಸಾಧನೆಯೇ ಸಾಕ್ಷಿ.

ಮನೆಯಲ್ಲಿ ನಾಲ್ಕು ರೀತಿಯ ಹಿಂದಿನ ಗಿಡಗಳನ್ನು ಅಥವಾ ಅಲಂಕಾರಿಕ ಗಿಡಗಳನ್ನು ಬೆಳೆಸಿ ನಾವು ಪರಿಸರವಾದಿಗಳು ಎಂದು ಭ್ರಮೆಯಲ್ಲಿರುತ್ತೇವೆ. ಪರಿಸರದ ಸಂರಕ್ಷಣೆಗೆ ನಿಜವಾದ ಕಾಳಜಿ ಇದ್ದಾಗ ನಮಗೆ ನಾವು ಹೋಗುವ ಪ್ರತಿ ತಳದಲ್ಲಿ ಬದುಕುವ ಪ್ರತಿ ಊರಿನಲ್ಲೂ ಪರಿಸರವನ್ನು ಕಾಯ್ದುಕೊಳ್ಳುವ ನೂರೊಂದು ದಾರಿಗಳು ಕಾಣುತ್ತವೆ.

ಕಾರಿನಲ್ಲಿ ಮನೆಗಳಲ್ಲಿ ನಿರಂತರವಾಗಿ ಏರ್ ಕಂಡೀಶನ್‌ನಲ್ಲಿ ಕುಳಿತು, ಪರಿಸರ ಸಂರಕ್ಷಣೆಯ ಬಗ್ಗೆ ಮಾತನಾಡುವುದು ಢಾಂಬಿಕತೆ ಎನಿಸುತ್ತದೆ. ಪರಿಸರದ ಬಗ್ಗೆ ಕಾಳಜಿ ಇದ್ದರೆ ನಾವು ಮಾಡುವ ಪ್ರತಿ ಕೆಲಸದಲ್ಲೂ, ನೋಡುವ ಪ್ರತಿ ನೋಟದಲ್ಲೂ ಯೋಚನೆಯಲ್ಲೂ ಬದಲಾವಣೆಯಾಗಬೇಕು. ಚಿಕ್ಕ ಚಿಕ್ಕ ಹೆಜ್ಜೆಗಳು ದೊಡ್ಡ ಬದಲಾವಣೆ ತರುತ್ತವೆ. ಪರಿಸರ ಬದಲಾವಣೆಯೂ ನಮ್ಮಿಂದಲೇ, ಒಂದು ಸಣ್ಣ ಹೆಜ್ಜೆಯಿಂದಲೇ ಆರಂಭವಾಗಬೇಕು.

**- ರೂಪಾ** ಗುರುರಾಜ್

# ಈ ಕಲಿಯುಗದಲ್ಲಿ ರಸ್ತೆಯೇ ಯುದ್ಧಭೂಮಿ

> » **ಮಹಾಭಾರತ ಯುದ್ಧವಾದರೂ ಸಂಜೆ ಮೇಲೆ ವಿರಾಮ ಪಡೆಯುತ್ತಿತ್ತು. ಆದರೆ, ರಸ್ತೆ ಎಂಬ ಯುದ್ಧ ಭೂಮಿ ಸಂಜೆ ಮೇಲೆಯೇ ಹೆಚ್ಚು ವ್ಯಸ್ತವಾಗಿರುವಂಥ ಯುದ್ಧಭೂಮಿ. ಸಾಮಾನ್ಯವಾಗಿ ಹೆಣ್ಣುಮಕ್ಕಳು ಗಾಡಿ ಓಡಿಸುವುದು ಭಯಾನಕವಾಗಿರುತ್ತದೆ ಎಂದು ಅಣಕಿಸುತ್ತಾರೆ. ಆದರೆ, ಒಮ್ಮೆ ಬೆಳಗ್ಗೆ ಶಾಲೆಗೆ ತಡವಾಯಿತೆಂದು ಮಕ್ಕಳನ್ನು ಬಿಡಲು ಹೋಗುವ ತಂದೆ ಓಡಿಸುವ ಗಾಡಿ ನೋಡಿದರೆ ಇನ್ನೂ ಭಯಾನಕವಾಗಿರುತ್ತದೆ.**

ನಗರನೋಟ

ದ್ವಾಪರ ಯುಗದಲ್ಲಿ ಕುರುಕ್ಷೇತ್ರ ಎಂಬ ಒಂದೇ ಒಂದು ಯುದ್ಧಭೂಮಿಯಿತ್ತು. ಅಲ್ಲಿ ಕೌರವ-ಪಾಂಡವರು ಧರ್ಮ ಮತ್ತು ಅಧಿಕಾರಕ್ಕಾಗಿ ಶಸ್ತ್ರಗಳನ್ನು ಹಿಡಿದು ಮುಖಾಮುಖಿಯಾಗಿದ್ದರು. ಆದರೆ ಈ ಕಲಿಯುಗದಲ್ಲಿ, ಪ್ರತಿಯೊಬ್ಬ ನಾಗರಿಕನೂ ಪ್ರತಿದಿನವೂ ಕಾಲಿಡುವ ರಸ್ತೆಯೇ ನಿಜವಾದ ಯುದ್ಧಭೂಮಿಯಾಗಿದೆ.

ವ್ಯತ್ಯಾಸವೇನೆಂದರೆ, ಇಲ್ಲಿ ಶಸ್ತ್ರಗಳ ಜಾಗದಲ್ಲಿ ಕಾರು-ಬೈಕುಗಳಿವೆ, ಯೋಧರ ಜಾಗದಲ್ಲಿ ಸಾಮಾನ್ಯ ಜನರಿದ್ದಾರೆ ಮತ್ತು ವೈರಿಗಳ ಜಾಗದಲ್ಲಿ ನಮ್ಮದೇ ಅತಿಯಾದ ವೇಗ, ಅಹಂಕಾರ ಹಾಗೂ ತಾಳ್ಮೆಯಿಲ್ಲದ ಮನಸ್ಥಿತಿಯಿದೆ. ಬೆಳಗ್ಗೆ ಮನೆಯಿಂದ ಹೊರಡುವಾಗ ಸುರಕ್ಷಿತವಾಗಿ ಹಿಂದಿರುಗಿ ಬರುವೆ ಎಂಬ ಭರವಸೆಯೂ ಇಲ್ಲದಷ್ಟರ ಮಟ್ಟಿಗೆ ನಾವು ಓಡಾಡುವ ರಸ್ತೆಗಳು, ಎದುರಾಗುವ ಗಾಡಿಗಳು ಭಯ ಹುಟ್ಟಿಸಿವೆ. ಸಾವು ಎಲ್ಲಿಂದ, ಯಾವ ರೂಪದಲ್ಲಿ ಬರುತ್ತದೋ ತಿಳಿಯದ ಭಯದ ಪ್ರತಿಯೊಬ್ಬ ವಾಹನ ಸವಾರನೂ ಪಯಣಿಸಬೇಕಾದ ದುಸ್ಥಿತಿ ಇಂದು ನಿರ್ಮಾಣವಾಗಿದೆ.

ಮಹಾಭಾರತ ಯುದ್ಧವಾದರೂ ಸಂಜೆ ಮೇಲೆ ವಿರಾಮ ಪಡೆಯುತ್ತಿತ್ತು. ಆದರೆ, ರಸ್ತೆ ಎಂಬ ಯುದ್ಧಭೂಮಿ ಸಂಜೆ ಮೇಲೆಯೇ ಹೆಚ್ಚು ವ್ಯಸ್ತವಾಗಿರುವಂಥ ಯುದ್ಧಭೂಮಿ. ಸಾಮಾನ್ಯವಾಗಿ ಹೆಣ್ಣುಮಕ್ಕಳು ಗಾಡಿ ಓಡಿಸುವುದು ಭಯಾನಕವಾಗಿರುತ್ತದೆ ಎಂದು ಅಣಕಿಸುತ್ತಾರೆ. ಆದರೆ, ಒಮ್ಮೆ ಬೆಳಗ್ಗೆ ಶಾಲೆಗೆ ತಡವಾಯಿತೆಂದು ಮಕ್ಕಳನ್ನು ಬಿಡಲು ಹೋಗುವ ತಂದೆ ಓಡಿಸುವ ಗಾಡಿ ನೋಡಿದರೆ ಇನ್ನೂ ಭಯಾನಕವಾಗಿರುತ್ತದೆ.

ಒನ್ ವೇಯಲ್ಲಿ ಉಲ್ಟಾ ಬರುವುದು ಈಗ ಏನೂ ತಪ್ಪೇ ಅಲ್ಲ. ಕಾರು ಅಥವಾ ಇನ್ಯಾವುದಾದರೂ ದೊಡ್ಡ ಗಾಡಿ ತಪ್ಪು ದಾರಿಯಲ್ಲಿ ಬಂದರೆ ಬೈಕ್‌ನವರು ಅಡ್ಡ ಹಾಕಿ ಅವರನ್ನು ಹಿಂದೆ ಕಳಿಸಿರುವಂಥ ಹಲವು ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಕೂಡ ಆಗಿವೆ. ಅದೇ ಒಂದು ವೇಳೆ ಬೈಕ್ ಅಥವಾ ಸ್ಕೂಟಿ ಎದುರು ದಿಕ್ಕಿನಿಂದ ಬಂದು ಅವರಿಗೇನಾದರೂ ವಾಪಸ್ ಹೋಗಿ ಎಂದರೆ, ಪಕ್ಕದಲ್ಲಿ ಜಾಗ ಇದ್ಯಲಾ ಗುರು ಹೋಗು ಅಂತ ರೇಗುತ್ತಾರೆ ಹೊರತು ಒಂದು ಸಲ ಮುಂದಿಟ್ಟ ಹೆಜ್ಜೆ ಹಿಂದಿಡೋ ಮಾತೇ ಇಲ್ಲ ಎಂಬ ನೋಟ ಬೀರುತ್ತಾರೆ.

ಒಂದೇ ಒಂದು ಮಾತು ಅಧಿಕವಾಗಿ ಹೇಳಿದರೂ ರಣರಂಗದಲ್ಲಿ ಯುದ್ಧ ಶುರುವಾಗುತ್ತದೆ. ಫುಟ್‌ಪಾತ್ ಮೇಲೆ ಬೈಕ್ ಓಡಿಸುವುದು ಸಹಜವಾಗಿ ಬಿಟ್ಟಿವೆ. ಅದೇ ರೀತಿ ರಸ್ತೆ ಮಧ್ಯದಲ್ಲಿ ಕೆಜಿಎ- ರಾಕಿ ಭಾಯ್ ರೀತಿ ಯಾರಿಗೂ, ಯಾವ ಗಾಡಿಗೂ ಲೆಕ್ಕಿಸದೇ ಒಂದು ಕೈಯಲ್ಲಿ ಫೋನು ಇಟ್ಟುಕೊಂಡು



ಇನ್ನೊಂದು ಕೈಯನ್ನು ಗಾಡಿಗಳಿಗೆ ನಿಲ್ಲಿಸಲು ಸನ್ನೆ ಮಾಡುತ್ತಾ ಹೋಗುವುದು ಕೂಡ ಸಹಜವಾಗಿಬಿಟ್ಟಿವೆ.

ಫುಟ್‌ಪಾತ್ ಮೇಲೆ ಬೈಕ್ ಓಡಿಸುವದು ಎಷ್ಟು ತಪ್ಪೋ, ರಸ್ತೆ ಮಧ್ಯೆ ಬೇಜವಾಬ್ದಾರಿಯಲ್ಲಿ ನಡೆಯುವುದು ಅಷ್ಟೇ ತಪ್ಪು. ಅದರಲ್ಲೂ ಕೆಲವೊಮ್ಮೆ ಚಿಕ್ಕ ಮಕ್ಕಳನ್ನು ರಸ್ತೆಯ ಬದಿಯಲ್ಲಿ ಕರೆದುಕೊಂಡು ಹೋಗುವುದನ್ನು ನೋಡಿದಾಗ ಭಯವಾಗುತ್ತದೆ. ಯಾವುದೇ ಸ್ಕೂಟಿ ಚಾಲಕರಾದರೂ ಒಂದು ಕೈ ಮಾತ್ರ ಗಾಡಿಯ ಆಕ್ಸಿಲರೇಟರ್ ಮೇಲಿರುತ್ತದೆ. ಇನ್ನೊಂದು ಕೈಯಲ್ಲಿ ಫೋನ್ ಹಿಡಿದುಕೊಂಡು ಕೆಲವರು ಮಾತನಾಡುತ್ತಿರುತ್ತಾರೆ, ಇನ್ನೂ ಕೆಲವರು ರೀಲ್ಸ್ ನೋಡುತ್ತಾ ಹೋಗುತ್ತಾರೆ.

ಫೋನ್ ಬಿಡಿ ಬಾಸ್ ಅಂತ ಹೇಳಿದರೆ ಸಾಕು ಯುದ್ಧಕ್ಕೆ ಕರೆಕೊಟ್ಟಂತೆ ಲೆಕ್ಕ. ಇಬ್ಬರು ಚಿಕ್ಕ ಮಕ್ಕಳು, ಹೆಂಡತಿಯನ್ನು ಕೂರಿಸಿಕೊಂಡು ಹೋಗುವ ಮನೆಯ ಯಜಮಾನ ಕೂಡ ಫೋನ್ ಬಳಸುವುದನ್ನು ನೋಡಿದಾಗ ಮದುವೆಯಾಗಿ ಹೀಗೆ ಬಾಳುವುದಕ್ಕಿಂತ ಸಿಂಗಲ್ ಆಗಿರುವುದೇ ಒಳ್ಳೆಯದು, ಹೇಗೂ ಸತ್ತರೆ ಒಂದೇ ಜೀವ ಅಂತನಿಸುತ್ತದೆ.

ರಸ್ತೆ ಎಂಬ ಯುದ್ಧಭೂಮಿಯಲ್ಲಿ ಇಂಥ ಚಕ್ರವ್ಯೂಹಗಳನ್ನು ದಾಟಿದರೂ ಇನ್ನೊಂದು ವಿಶೇಷ ಪ್ರವೇಶ ಇರುತ್ತದೆ. ಅದು ಯಾವಾಗ ಎಲ್ಲಿ ಹೇಗೆ ಪ್ರವೇಶವಾಗುತ್ತದೆ ಎನ್ನುವುದು ಕಷ್ಟ. ಅವರೇ ಈ ಡೆಲಿವರಿ ಬಾಯ್ಸ್! ಈ ಸ್ವಿಗ್ಗಿ, ಬ್ಲಿಂಕಿಟ್, ಜೊಮಾಟೊ ಎಲ್ಲರೂ ಕಾಂಪಿಟೇಶನ್‌ನಲ್ಲಿ ನಾವು ಕೇವಲ 5 ನಿಮಿಷದಲ್ಲಿ ನಿಮ್ಮ ಮನೆ ಬಾಗಿಲಿಗೆ ಡೆಲಿವರಿ ಕೊಡ್ತೀವಿ ಅಂತ ಹೇಳಿ ಇಲ್ಲಿ ಡೆಲಿವರಿ ಬಾಯ್ ಯದ್ವಾತದ್ವಾ ಗಾಡಿ ಓಡಿಸುವ ಹಾಗೆ ಮಾಡಿದ್ದಾರೆ. ಸಮಯಕ್ಕೆ ಸರಿಯಾಗಿ ತಲುಪಬೇಕು ಎಂಬ ಒತ್ತಡದಲ್ಲಿ ಅವರು ಗಾಡಿ ನುಗ್ಗಿಸಿಕೊಂಡು ಹೋಗುವುದನ್ನು ಕಂಡಾಗ ಗಾಬರಿಯಾಗುತ್ತದೆ.

ಇಷ್ಟೇ ಅಲ್ಲ, ಯುದ್ಧದ ತೀವ್ರತೆ ಇನ್ನೂ ಹೆಚ್ಚಾಗುತ್ತದೆ. ಅದಕ್ಕೆ ನಮ್ಮ ರಸ್ತೆಗಳೇ ಕಾರಣ. ಯಾವಾಗ ಯಾವ ರಸ್ತೆ ಅರ್ಧ ಮುಚ್ಚುತ್ತಾರೆ, ಅರ್ಧ ಹೊಂಡ ತೋಡುತ್ತಾರೆ, ಎಲ್ಲಿ ಯಾವಾಗ ಟ್ರಾಫಿಕ್ ಜಾಮ್ ಆಗುತ್ತದೆ ಎನ್ನುವುದೇ ಕಷ್ಟ. ಸದ್ಯ ರಸ್ತೆಯ ಪರಿಸ್ಥಿತಿಯನ್ನು ನೋಡಿದಾಗ ಶ್ರೀನಿವಾಸ ನಗರವನ್ನು ಶ್ರೀನೋವಾಸನಗರ ಎನ್ನಬಹುದು ಅನಿಸುತ್ತದೆ.

ಪ್ರತಿ ರಸ್ತೆಯ ಬದಿಯಲ್ಲೂ ಗಾಡಿಗಳು ನಿಲ್ಲಿಸಿರುತ್ತಾರೆ. ಒಂದು ಚೂರು ಸೈಡ್‌ಗೆ ನಿಲ್ಲಿಸಬಹುದಿತ್ತು ಅಥವಾ ಗುರು ನಿಮ್ ಗಾಡಿಯಿಂದಾನೇ ಇಷ್ಟು ಟ್ರಾಫಿಕ್ ಆಗಿದ್ದು ಅಂತ ಹೇಳಿದರೆ ಸಾಕು, ಏನ್ ಎರಡ್ ನಿಮಿಷ ಕಾಯಕ್ಕಾಗಲ್ವ ಎಂಬ ಉತ್ತರದ ಜತೆಗೆ ಜಗಳವೇ ಶುರುವಾಗುತ್ತದೆ ಹೊರತು ಬೇರೆ ಏನೂ ಆಗುವುದಿಲ್ಲ. ಎಲ್ಲರೂ ರೇಜ್ ಬೇಟ್ ಮೂಡ್‌ನಲ್ಲಿಯೇ ಇರುತ್ತಾರೆ. ರಸ್ತೆಗಳಲ್ಲಿ, ಕೆಲವು ಕಾರ್ನರ್‌ಗಳಲ್ಲಿ ಕಾರು ಪಾರ್ಕ್ ಆಗಿರುವುದನ್ನು ಕಂಡಾಗ ಆ ಗಾಡಿಗಳನ್ನು ಪುಡಿ ಮಾಡಿಯೇ ಹೋಗೋಣ ಎಂಬಷ್ಟು ಕೋಪ ಬರುತ್ತದೆ. ಹೇಗೆ ನಿಲ್ಲಿಸಬೇಕು, ಎಲ್ಲಿ ನಿಲ್ಲಿಸಬೇಕು ಎಂಬ ಸಣ್ಣ ಸಾಮಾನ್ಯ ಪ್ರಜ್ಞೆಯೂ ಯಾರಲ್ಲಿಯೂ ಇಲ್ಲವೇ? ಎಂಬ ಪ್ರಶ್ನೆ ಮೂಡುತ್ತದೆ. ಹೀಗೆ ಕಾರ್ನರ್‌ನಲ್ಲಿ ನಿಲ್ಲಿಸಿದ ಗಾಡಿಯಿಂದಾಗಿ ನನ್ನ ಗೆಳೆಯನೊಬ್ಬನಿಗೆ ಒಮ್ಮೆ ಆಕ್ಸಿಡೆಂಟ್ ಕೂಡ ಆಗಿತ್ತು.

ಇನ್ನು ಸಿಟಿ ಬಿಟ್ಟು ಸ್ವಲ್ಪ ಹೊರಗೆ ಹೋಗೋಣ, ನೈಸ್ ಅಥವಾ ಎಕ್ಸ್‌ಪ್ರೆಸ್ ವೇಯಲ್ಲಿ ಹೋಗೋಣ ಎಂದರೆ ವ್ಹೀಲಿಂಗ್ ಮಾಡುವ ದುರುಳರ ಕಾಟ. ರೊಯ್ಯನೆ ನಮ್ಮ ಪಕ್ಕದಲ್ಲೇ ಒಂದೇ ಚಕ್ರದಲ್ಲಿ ಹೋಗುವ ಇವರಿಂದ, ಸರಿಯಾಗಿ ಚಲಾಯಿಸುವವರೇ ಕಕ್ಕಾಬಿಕ್ಕಿಯಾಗಿ ಲೇನ್ ತಪ್ಪುವ ಪ್ರಸಂಗ. ಇವರು ಸಾಯುವುದಿಲ್ಲ, ರಸ್ತೆಯ ಮೇಲಿರುವ ಇತರರನ್ನು ಸಾಯಿಸುತ್ತಾರೆ.

ಹೀಗೆ ಕೆಲವು ಅಂಕಿ-ಅಂಶಗಳನ್ನು ನೋಡುತ್ತಿದ್ದೆ. ಭಾರತೀಯ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ವರದಿಗಳ ಪ್ರಕಾರ, ನಮ್ಮ ದೇಶದಲ್ಲಿ ಪ್ರತಿವರ್ಷ ಸರಾಸರಿ ಒಂದೂವರೆ ಲಕ್ಷಕ್ಕೂ ಹೆಚ್ಚು ಜನರು ರಸ್ತೆ ಅಪಘಾತಗಳಲ್ಲಿ ತಮ್ಮ ಜೀವ ಕಳೆದುಕೊಳ್ಳುತ್ತಿದ್ದಾರೆ. ಅಂದರೆ, ಪ್ರತಿ ನಾಲ್ಕು ನಿಮಿಷಕ್ಕೆ ಒಬ್ಬ ವ್ಯಕ್ತಿ ರಸ್ತೆಯಲ್ಲಿ ಪ್ರಾಣ ತೆರುತ್ತಿದ್ದಾನೆ.

ಬೆಂಗಳೂರಿನಂಥ ಮಹಾನಗರಗಳಲ್ಲಿ ದಿನನಿತ್ಯ ಸಂಭವಿಸುವ ಸಣ್ಣಪುಟ್ಟ ಘರ್ಷಣೆಗಳು, ರಸ್ತೆ ಗುಂಡಿಗಳಿಂದಾಗಿ ಬಿದ್ದು ಪ್ರಾಣ ಕಳೆದುಕೊಳ್ಳುವ ದ್ವಿಚಕ್ರ ವಾಹನ ಸವಾರರು, ಮತ್ತು ಹೆದ್ದಾರಿಗಳಲ್ಲಿ ನಡೆಯುವ ಭೀಕರ ಅಪಘಾತಗಳು ಕೇವಲ ಸುದ್ದಿಯ ತುಣುಕುಗಳಾಗಿ ಉಳಿಯದೆ, ಸಾವಿರಾರು ಕುಟುಂಬಗಳ ಭವಿಷ್ಯವನ್ನೇ ಕತ್ತಲಿಗೆ ತಳ್ಳುತ್ತಿವೆ. ಸಿಗ್ನಲ್ ಜಂಪ್ ಮಾಡುವ ಧಾವಂತ, ಮದ್ಯಪಾನ ಮಾಡಿ ವಾಹನ ಚಲಾಯಿಸುವುದು ಮತ್ತು ವಾಹನ ಚಾಲನೆಯಲ್ಲಿ ಮೊಬೈಲ್ ಬಳಕೆಯಂಥ ಸಣ್ಣ ಅಜಾಗರೂಕತೆಗಳು ಜೀವ ತೆಗೆಯುವ ದುರಂತಗಳಾಗಿ ಮಾರ್ಪಡುತ್ತಿವೆ.

ಮಾನವನ ಮನಸ್ಥಿತಿ ಮತ್ತು ವರ್ತನೆಯೇ ಈ ಅಸಲಿ ಯುದ್ಧಕ್ಕೆ ಪ್ರಮುಖ ಕಾರಣ. ವೇಗವೇ ಸಾವು, ತಾಳ್ಮೆಯೇ ಜೀವನ, ನಿಧಾನವೇ ಪ್ರಧಾನ ಎಂಬ ಹಿತವಚನಗಳನ್ನು ನಾವು ಬಸ್ ಹಿಂದೆ ಮಾತ್ರ ನೋಡುತ್ತೇವೆಯೇ ಹೊರತು, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಿಲ್ಲ. ವಾಹನದ ಸೀಟಿನ ಮೇಲೆ ಕುಳಿತ ತಕ್ಷಣ ಮನುಷ್ಯ ತನ್ನ ವಿವೇಕವನ್ನು ಬಲಿಕೊಟ್ಟು, ಆವೇಶಕ್ಕೆ ಒಳಗಾಗುತ್ತಾನೆ.

ಈ ರಕ್ತಸಿಕ್ತ ಯುದ್ಧವನ್ನು ಕೊನೆಗಾಣಿಸಲು ನಾಗರಿಕರಾದ ನಾವು ತಕ್ಷಣವೇ ಜಾಗೃತರಾಗಬೇಕಿದೆ. ರಸ್ತೆಯಲ್ಲಿ ಜಯಿಸುವುದು ಎಂದರೆ ವೇಗವಾಗಿ ಗುರಿ ತಲುಪುವುದಲ್ಲ, ಸುರಕ್ಷಿತವಾಗಿ ತಲುಪುವುದು ಎಂಬುದನ್ನು ಪ್ರತಿಯೊಬ್ಬರೂ ನೆನಪಿನಲ್ಲಿಡಬೇಕು. ಗಾಡಿ ಓಡಿಸುವಾಗ ಮೊಬೈಲ್ ಫೋನ್ ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸಬೇಕು.

ಸ್ವಲ್ಪ ಸಮಯ ತಡವಾದರೂ ಪರವಾಗಿಲ್ಲ, ಜೀವ ಉಳಿಯುವುದು ಮುಖ್ಯ ಎಂಬ ತಾಳ್ಮೆಯನ್ನು ಮೈಗೂಡಿಸಿಕೊಳ್ಳಬೇಕು. ಪಾದಚಾರಿಗಳು, ಮಕ್ಕಳು ಮತ್ತು ವಯೋವೃದ್ಧರಿಗೆ ರಸ್ತೆ ದಾಟಲು ಮೊದಲ ಆದ್ಯತೆ ನೀಡುವುದು ನಮ್ಮ ನೈತಿಕ ಕರ್ತವ್ಯವಾಗಬೇಕು. ಒಬ್ಬೊಬ್ಬನೂ ತನ್ನ ಕರ್ತವ್ಯ ಮಾಡುತ್ತೇನೆ ಎಂದು ನಿರ್ಧಾರ ತೆಗೆದುಕೊಂಡರೆ ಎಲ್ಲರಿಗೂ ಒಳಿತಾಗುತ್ತದೆ.

ಅದೇ ರೀತಿ, ಸರಕಾರ ಮತ್ತು ಪೊಲೀಸರು ಕೂಡ ಜವಾಬ್ದಾರಿ ತೆಗೆದುಕೊಳ್ಳಬೇಕು. ಕೇವಲ ದಂಡ ವಿಧಿಸುವುದಕ್ಕೆ ಮಾತ್ರ ಸೀಮಿತವಾಗಬಾರದು. ಇತ್ತೀಚೆಗೆ ನಗರ ಸಚಿವ ಕೃಷ್ಣಬೈರೇಗೌಡ ಅವರು ಫುಟ್‌ಪಾತ್ ತೆರವುಗೊಳಿಸಿದ ಹಾಗೆಯೇ ಬೇಕಾಬಿಟ್ಟಿ ಪಾರ್ಕ್ ಮಾಡಲಾದ ಗಾಡಿಗಳಿಗೂ ಸರಿಯಾದ ವ್ಯವಸ್ಥೆ ಒದಗಿಸಿದರೆ ಉತ್ತಮ. ಗಿರಿನಗರದಿಂದ ವಿಜಯನಗರ ಹೋಗಲು ಇರುವುದೇ ಒಂದು ಸರಿಯಾದ ದಾರಿ. ಅದನ್ನು ಇಷ್ಟು ದಿನ ವೈಟ್ ಟಾಪಿಂಗ್ ಕಾರಣಕ್ಕೆ ಮುಚ್ಚಲಾಗಿತ್ತು.

ಅದನ್ನು ಈಗ ತೆರೆಯಲಾಗಿದೆ. ಆದರೆ, ಅರ್ಧ ಭಾಗದಷ್ಟು ರಸ್ತೆ ಗಾಡಿಗಳ ಪಾರ್ಕಿಂಗ್ ಲಾಟ್ ಆಗಿದೆ. ವೈಟ್ ಟಾಪಿಂಗ್‌ಗಿಂತ ಮೊದಲೇ ಪರವಾಗಿರಲಿಲ್ಲ ಎಂಬ ಭಾವನೆ ಬರುತ್ತದೆ. ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದರ ಜೊತೆಗೆ, ಚಾಲನಾ ಪರವಾನಗಿ ನೀಡುವ ಪ್ರಕ್ರಿಯೆಯಲ್ಲಿ ಲಂಚಕ್ಕೆ ಅವಕಾಶ ನೀಡದೆ ಕಠಿಣ ಪರೀಕ್ಷೆಗಳನ್ನು ನಡೆಸಬೇಕು.

ಖಾಸಗಿ ವಾಹನಗಳ ಈ ವಿಪರೀತ ದಟ್ಟಣೆಗೆ ಕಡಿವಾಣ ಹಾಕಲು ಸರಕಾರವು ನಮ್ಮ ಮೆಟ್ರೋ ಹಾಗೂ ಬಿಎಂಟಿಸಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಇನ್ನಷ್ಟು ಸುಗಮ ಹಾಗೂ ವೇಗವಾಗಿ ಸಿಗುವಂತೆ ಮೇಲ್ದರ್ಜೆಗೇರಿಸಬೇಕಿದೆ. ಪ್ರತಿಯೊಬ್ಬರೂ ಪ್ರತ್ಯೇಕ ವಾಹನ ಹಿಡಿದು ರಸ್ತೆಗೆ ಇಳಿಯುವ ಬದಲು, ಸಾರ್ವಜನಿಕ ಸಾರಿಗೆ ಬಳಕೆಗೆ ಆದ್ಯತೆ ನೀಡಿದರೆ ರಸ್ತೆಯ ಮೇಲಿನ ಅರ್ಧದಷ್ಟು ಯುದ್ಧದ ತೀವ್ರತೆ ತಾನಾಗಿಯೇ ಕಡಿಮೆಯಾಗುತ್ತದೆ.

ಇದರ ಜೊತೆಗೆ, ಸಾಲು ಸಾಲು ಕಾರುಗಳನ್ನು ತಂದು ರಸ್ತೆಬದಿಯ ಪಾರ್ಕ್ ಮಾಡುವವರ ವಿರುದ್ಧ ಸರಕಾರ ಪಾರ್ಕಿಂಗ್ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಸ್ವಂತ ಪಾರ್ಕಿಂಗ್ ಜಾಗವಿಲ್ಲದಿದ್ದರೂ ವಾಹನ ಕೊಂಡು ರಸ್ತೆ ಬದಿ ದೂಳು ತಿನ್ನಿಸುವ ಪ್ರವೃತ್ತಿಗೆ ಕಡಿವಾಣ ಬಿಗಿ ಮಾತ್ರ ನಗರದ ಮುಖ್ಯ ರಸ್ತೆಗಳು ಉಸಿರಾಡಲು ಸಾಧ್ಯ.

ರಸ್ತೆ ಎಂಬುದು ಎರಡು ಜಾಗಗಳನ್ನು ಜೋಡಿಸುವ ಸೇತುವೆಯಾಗಬೇಕೇ ಹೊರತು, ಯುದ್ಧಭೂಮಿಯಾಗಬಾರದು. ನಾವು ಜೀವಿಸುತ್ತಿರುವ ಕಲಿಯುಗದಲ್ಲಿ ತಾಂತ್ರಿಕತೆ ಎಷ್ಟೇ ಮುಂದುವರಿದಿದ್ದರೂ, ಮಾನವೀಯ ಮೌಲ್ಯ ಮತ್ತು ಜೀವದ ಬೆಲೆಗಿಂತ ದೊಡ್ಡದು ಯಾವುದೂ ಇಲ್ಲ. ನಿಯಮಗಳ ಪಾಲನೆ, ಪರಸ್ಪರ ಗೌರವ ಮತ್ತು ತಾಳ್ಮೆಯಿಂದ ಮಾತ್ರ ನಾವು ಈ ರಸ್ತೆ ಯುದ್ಧವನ್ನು ಶಮನಗೊಳಿಸಲು ಸಾಧ್ಯ. ಸರಕಾರದ ದೃಢ ಸಂಕಲ್ಪ ಮತ್ತು ನಾಗರಿಕರ ಜವಾಬ್ದಾರಿಯುತ ನಡವಳಿಕೆ ಒಂದಾದಾಗ ಮಾತ್ರ ನಮ್ಮ ಪ್ರತಿಯೊಂದು ಪ್ರಯಾಣವೂ ಸುಖಕರ ಹಾಗೂ ಸುರಕ್ಷಿತ ಭವಿಷ್ಯದತ್ತ ಸಾಗುವ ಹಾದಿಯಾಗುತ್ತದೆ.

**- ಪ್ರಮೋದ** ಮೋಹನ ಹೆಗಡೆ



# ಪುಣ್ಯಕೋಟಿ: ಇದರ ಬಗ್ಗೆ ಯಾರು ಪ್ರಶ್ನೆ ಮಾಡುವುದಿಲ್ಲ...

> ನಾನು ಹುಲಿ. ನೀವೆಲ್ಲರೂ ಪುಣ್ಯಕೋಟಿ ಕಥೆ ಕೇಳಿದ್ದೀರಿ ಅದರಲ್ಲಿ ನಿಮ್ಮ ದನವನ್ನು ಎತ್ತರಕ್ಕೆ ಏರಿಸಿ ಕೊಂಡಾಡಿದ್ದೀರಿ. ಆದರೆ ಅವತ್ತು ಸತ್ತ ನನ್ನ ಕುಟುಂಬದ ಹುಲಿರಾಯ ಆತ ಮಕ್ಕಳನ್ನು ಕಳೆದುಕೊಂಡ ಹೆಂಡತಿ ತಂದೆ ತಾಯಿ ಬಂಧು ಬಳಗ ಎಲ್ಲರಿಂದ ದೂರಾಗಿ ಬಿಟ್ಟ ನಮ್ಮವರೆಲ್ಲೂ ಅನಾಥರಾಗಿದ್ದರು ಆತನನ್ನ ನಂಬಿ ಒಂದು ಕುಟುಂಬವಿತ್ತು.

ಇಷ್ಟು ದಿನ ಮಾತಾಡ್ಲಿಲ್ಲ ಹಾಗಾಗಿ ಇವತ್ತು ಮಾತನಾಡಲೇಬೇಕು ಇಲ್ಲದಿದ್ದರೆ ಇದೆಲ್ಲರಿಗೂ ಮರೆತೆ ಹೋಗಿ ಬಿಡುತ್ತೆ. ನಾನು ಹುಲಿ. ನೀವೆಲ್ಲರೂ ಪುಣ್ಯಕೋಟಿ ಕಥೆ ಕೇಳಿದ್ದೀರಿ ಅದರಲ್ಲಿ ನಿಮ್ಮ ದನವನ್ನು ಎತ್ತರಕ್ಕೆ ಏರಿಸಿ ಕೊಂಡಾಡಿದ್ದೀರಿ. ಆದರೆ ಅವತ್ತು ಸತ್ತ ನನ್ನ ಕುಟುಂಬದ ಹುಲಿರಾಯ ಆತ ಮಕ್ಕಳನ್ನು ಕಳೆದುಕೊಂಡ ಹೆಂಡತಿ ತಂದೆ ತಾಯಿ ಬಂಧು ಬಳಗ ಎಲ್ಲರಿಂದ ದೂರಾಗಿ ಬಿಟ್ಟ ನಮ್ಮವರೆಲ್ಲೂ ಅನಾಥರಾಗಿದ್ದರು ಆತನನ್ನ ನಂಬಿ ಒಂದು ಕುಟುಂಬವಿತ್ತು. ಆದರೆ ನೀವು ಯಾರು ಯಾಕೆ ಆ ಹುಲಿರಾಯನ ಕುಟುಂಬದ ಬಗ್ಗೆ ಯೋಚನೆ ಕೂಡ ಮಾಡ್ಲಿಲ್ಲ. ಅಲ್ಲ ಒಂದು ಯೋಚನೆ ಮಾಡಿ ಆ ಕ್ಷಣದಲ್ಲಿ ಆ ಹುಲಿರಾಯನಿಗೆ ಸಾಯುವುದು ಬಿಟ್ಟು ಬೇರೆ ಯಾವ ಅವಕಾಶವಿದೆ. ಏಕೆಂದರೆ ಆತ ತಿನ್ನುವುದು ಮಾಂಸ. ಪುಣ್ಯಕೋಟಿಯನ್ನ ಬಿಟ್ಟ ಮೇಲೆ ಬೇರೆ ಯಾವುದೇ ದನವನ್ನು ಮುಟ್ಟುವುದಿಲ್ಲ ಅಂತಲೇ ಅರ್ಥ. ಹಾಗಿದ್ದ ಮೇಲೆ ಉಪವಾಸದಿಂದ ಸಾಯುದೇತಕೆ ಅನ್ನುವ ಕಾರಣ ಆತ ಪ್ರಾಣವನ್ನರ್ಪಿಸಿದ. ದನವು ಮತ್ತೆ ಹೋಗಿ ತನ್ನ ಮಕ್ಕಳನ್ನು ಭೇಟಿಯಾಯಿತು ಸಂಬಂಧಿಕರ ಜೊತೆ ಮಾತನಾಡಿತು. ಆದರೆ ಹುಲಿರಾಯನ ಕುಟುಂಬ ಅನಾಥವಾಯಿತಲ್ಲ ಇದರ ಬಗ್ಗೆ ಯಾರು ಪ್ರಶ್ನೆ ಮಾಡುವುದಿಲ್ಲ ಮಾತಾಡುವುದಿಲ್ಲ ಹಾಗಾಗಿ ಈಗ ನಾನು ಬಂದಿದ್ದೇನೆ ನನಗೆ ಉತ್ತರ ಬೇಕು ಅದು ನಿಮ್ಮಿಂದಲೇ.

**- ಧೀರಜ್** ಬೆಳ್ಳಾರೆ



# ನೈತಿಕ, ಸಮಾಜಮುಖಿ ಪತ್ರಿಕೋದ್ಯಮಕ್ಕೆ ಆದ್ಯತೆ ನೀಡಿ

## ಹೊಳೆನರಸೀಪುರ ಪತ್ರಿಕಾ ದಿನಾಚರಣೆಯಲ್ಲಿ ಗಣ್ಯರ ಅಭಿಮತ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ತಾಲ್ಲೂಕಿನ ಕಟ್ಟೆಬೆಳಗುಲಿ ಶ್ರೀರಾಮದೇವರ ಅಣೆಕಟ್ಟೆ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು ಪ್ರಾಮಾಣಿಕ, ನೈತಿಕ ಹಾಗು ಸಮಾಜಮುಖಿ ಪತ್ರಿಕೋದ್ಯಮವನ್ನು ಬಲಪಡಿಸುವ ಅಗತ್ಯವನ್ನು ಒತ್ತಿ ಹೇಳುವ ಜೊತೆಗೆ ಪತ್ರಿಕೋದ್ಯಮದ ಜವಾಬ್ದಾರಿ, ಪತ್ರಕರ್ತರ ಸಮಸ್ಯೆಗಳು ಹಾಗು ಜಿಲ್ಲೆಯ ಅಭಿವೃದ್ಧಿ ಕುರಿತು ಅಭಿಪ್ರಾಯ ಹಂಚಿಕೊಂಡರು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಮಾತನಾಡಿ, ತಮ್ಮ ಮೂರು ದಶಕಗಳ ಶಾಸಕ ಜೀವನದಲ್ಲಿ ಪತ್ರಕರ್ತರ ರಚನಾತ್ಮಕ ಸಲಹೆಗಳು ಹಾಗು ವಿಮರ್ಶೆಗಳು ಜನಸೇವೆಗೆ ಮಾರ್ಗದರ್ಶನ ನೀಡಿವೆ. ಜಿಲ್ಲೆಯ ಅಭಿವೃದ್ಧಿಯಲ್ಲಿ ಪತ್ರಿಕಾರಂಗದ ಕೊಡುಗೆ ಮಹತ್ವದ್ದಾಗಿದೆ ಎಂದು ಹೇಳಿದ ಅವರು, ಐಐಟಿ ಹಾಗು ಕೇಂದ್ರೀಯ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಕೈಗೊಂಡ ಪ್ರಯತ್ನಗಳು, ಅಭಿವೃದ್ಧಿ ಯೋಜನೆಗಳು ಹಾಗು ಮೂಲಸೌಕರ್ಯ ವೃದ್ಧಿ ಕಾರ್ಯಗಳನ್ನು ಸ್ಮರಿಸಿದರು. ಹೊಳೆನರಸೀಪುರದಲ್ಲಿ ಪತ್ರಕರ್ತರಿಗಾಗಿ ಸುಸಜ್ಜಿತ ಪತ್ರಿಕಾ ಭವನ ನಿರ್ಮಾಣಕ್ಕೆ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮಾಜಿ ಸಚಿವ ಎ.ಮಂಜು ಅವರು ಮಾತನಾಡಿ, ಪತ್ರಿಕಾರಂಗವು ಸಮಾಜದ ಕನ್ನಡಿಯಾಗಿದ್ದು, ಜನರ ಸಮಸ್ಯೆಗಳನ್ನು ಆಡಳಿತದ ಗಮನಕ್ಕೆ ತಂದು ನ್ಯಾಯ ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಪತ್ರಕರ್ತರು ಪರಸ್ಪರ ಒಗ್ಗಟ್ಟಿನಿಂದ ಸಮಾಜದ ಹಿತಾಸಕ್ತಿಗಾಗಿ ಕಾರ್ಯನಿರ್ವಹಿಸಬೇಕೆಂದರು.



> ಪತ್ರಿಕಾ ದಿನಾಚರಣೆ ಆತ್ಮಾವಲೋಕನದ ದಿನವಾಗಿದ್ದು, ಸಮಾಜದ ವಿಶ್ವಾಸ ಉಳಿಸುವ ನೈತಿಕ ಪತ್ರಿಕೋದ್ಯಮಕ್ಕೆ ಎಲ್ಲರೂ ಬದ್ಧರಾಗಬೇಕು. ಪತ್ರಕರ್ತರ ಹೆಸರಿನಲ್ಲಿ ಬ್ಲ್ಯಾಕ್‌ಮೇಲ್, ಹಣ ವಸೂಲಿ ಹಾಗು ಅಕ್ರಮ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕು.
> -ಜೆ.ಆರ್.ಕೆಂಚೇಗೌಡ, ಜಿಲ್ಲಾಧ್ಯಕ್ಷ ಕಾರ್ಯನಿರತ ಪತ್ರಕರ್ತರ ಸಂಘ

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಮಾತನಾಡಿ, ಹೊಳೆನರಸೀಪುರದಲ್ಲಿ ಪತ್ರಕರ್ತರ ಭವನ ಹಾಗು ಕಚೇರಿ ನಿರ್ಮಾಣಕ್ಕೆ ನಿವೇಶನ ಒದಗಿಸುವಂತೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರಿಗೆ ಮನವಿ ಸಲ್ಲಿಸಿದರು. ರಾಜ್ಯದ ಹಲವು ಜಿಲ್ಲೆಗಳಲ್ಲಿ ಪತ್ರಕರ್ತರಿಗೆ ಭವನ ಹಾಗು ನಿವೇಶನ ಕಲ್ಪಿಸಿರುವ ಮಾದರಿಯಲ್ಲೇ ಇಲ್ಲಿ ಕೂಡ ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸಿದರು. ಅನಾರೋಗ್ಯದಿಂದ ಬಳಲುತ್ತಿರುವ ಪತ್ರಕರ್ತ ರಾಧಾಕೃಷ್ಣ ಅವರಿಗೆ ಸಂಘದ ವತಿಯಿಂದ 10 ಸಾವಿರ ಆರ್ಥಿಕ ನೆರವು ಘೋಷಿಸಿ, ಸಂಕಷ್ಟದಲ್ಲಿರುವ ಪತ್ರಕರ್ತರ ನೆರವಿಗೆ ಸಂಘ ಸದಾ ಬದ್ಧವಾಗಿದೆ ಎಂದು ತಿಳಿಸಿದರು.

ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಯೂಟ್ಯೂಬ್, ಸಾಮಾಜಿಕ ಜಾಲತಾಣ ಹಾಗೂ ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಹೆಸರಿನಲ್ಲಿ ಕೆಲವರು ಪತ್ರಕರ್ತರಂತೆ ವರ್ತಿಸಿ ಅಧಿಕಾರಿಗಳಿಗೆ ಅನಗತ್ಯ ಒತ್ತಡ ಹೇರುವ ಪ್ರವೃತ್ತಿ ಹೆಚ್ಚುತ್ತಿದೆ. ಸುಳ್ಳು ಸುದ್ದಿಗಳು ಹಾಗು ಸೆಟಲ್‌ಮೆಂಟ್ ಪತ್ರಿಕೋದ್ಯಮಕ್ಕೆ ಅಧಿಕಾರಿಗಳು ಮಣಿಯಬಾರದು. ಸತ್ಯಾಸತ್ಯತೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಮಾನನಷ್ಟ ಮೊಕದ್ದಮೆ ಸೇರಿ ಕಾನೂನು ಕ್ರಮ ಕೈಗೊಳ್ಳ ಬೇಕೆಂದು ಸಲಹೆ ನೀಡಿದ ಅವರು, ನಿಜವಾದ ಗ್ರಾಮೀಣ ಪತ್ರಕರ್ತರು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದು, ಕೆಲವರ ದುಷ್ಕೃತ್ಯಗಳಿಂದ ಇಡೀ ಪತ್ರಿಕೋದ್ಯಮಕ್ಕೆ ಕಳಂಕ ಬರಬಾರದು ಎಂದು ಹೇಳಿದರು.

ತಹಶೀಲ್ದಾರ್ ವಿ.ಎಂ.ರೇಣುಕುಮಾರ್, ವಿಶೇಷ ಭೂಸ್ವಾಧೀನಾಧಿಕಾರಿ ಡಾ. ಮಂಜುನಾಥ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಆರ್.ಬಿ.ಪುಟ್ಟೇಗೌಡ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಹೆಚ್.ಎಸ್.ಪುಟ್ಟಸೋಮಪ್ಪ, ಹೆಚ್.ವೈ.ಚಂದ್ರಶೇಖರ್, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವೆಂಕಟೇಶ್ ಅವರು ಪ್ರಾಸ್ತಾವಿಕವಾಗಿ ಸ್ವಾಗತಿಸಿದರು. ಜಿಲ್ಲಾ ಸಂಘದ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಹಾಗು ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು.

# ರಾಜೀನಾಮೆ ನೀಡಿದ್ರೆ ತಕ್ಷಣ ಅಂಗೀಕಾರ

» ಮೊದಲನೇ ಪುಟದಿಂದ

**ನಾರಾಯಣಸ್ವಾಮಿ, ನಂಜೇಗೌಡ, ಸಂಗಮೇಶ್ ಅಸಮಾಧಾನ**

ಕೋಲಾರದ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಸಚಿವ ಸ್ಥಾನ ಕೈತಪ್ಪಿರುವುದಕ್ಕೆ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅವರ ಬೆಂಬಲಿಗ ಹರೀಶ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಮಾಲೂರು ಶಾಸಕ ಕೆ.ವೈ.ನಂಜೇಗೌಡ ಕೂಡ ಸಚಿವ ಸ್ಥಾನ ಸಿಗದಿರುವುದಕ್ಕೆ ಅಸಮಾಧಾನ ಹೊರಹಾಕಿದ್ದಾರೆ. ಮತ್ತೊಂದೆಡೆ, ಭದ್ರಾವತಿ ಶಾಸಕ ಬಿ.ಕೆ.ಸಂಗಮೇಶ್ ಕೂಡ ತಮ್ಮ ಮುಂದಿನ ರಾಜಕೀಯ ನಡೆ ಕುರಿತು ಬೆಂಬಲಿಗರೊಂದಿಗೆ ಚರ್ಚಿಸುವುದಾಗಿ ಹೇಳಿದ್ದಾರೆ. ದಾವಣಗೆರೆ ಜಿಲ್ಲೆಯ ಹೊನ್ನಾಳಿ ಕ್ಷೇತ್ರದ ಹಿರಿಯ ಶಾಸಕ ಡಿ.ಜಿ. ಶಾಂತನಗೌಡ ಕೂಡ ಸಚಿವ ಸ್ಥಾನ ಕೈತಪ್ಪಿರುವುದಕ್ಕೆ ಅಸಮಾಧಾನಗೊಂಡಿದ್ದಾರೆ.

**ಮಹದೇವಪ್ಪ ಬೆಂಬಲಿಗರಿಂದಲೂ ಒತ್ತಡ**

ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡದಿರುವುದು ಅವರ ಬೆಂಬಲಿಗರಲ್ಲೂ ಅಸಮಾಧಾನ ಮೂಡಿಸಿದೆ. ಮಹದೇವಪ್ಪ ಅವರ ಪುತ್ರ, ಹಾಗು ಸಂಸದ ಸುನಿಲ್ ಬೋಸ್ ಅವರಿಗೆ ರಾಜೀನಾಮೆ ನೀಡುವಂತೆ ಬೆಂಬಲಿಗರು ಹಾಗು ಕಾರ್ಯಕರ್ತರು ಒತ್ತಾಯಿಸಿದ್ದಾರೆ.

**ತನ್ವೀರ್ ಸೇಠ್ ಬೆಂಬಲಿಗರ ಪ್ರತಿಭಟನೆ:** ಹಿರಿಯ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಅವರಿಗೆ ಸಚಿವ ಸ್ಥಾನ ನೀಡ ದಿರುವುದು ಮೈಸೂರಿನಲ್ಲಿ ಆಕ್ರೋ ಶಕ್ಕೆ ಕಾರಣವಾಗಿದೆ. ಅವರ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ. ವಿಜಯನಗರ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಹಾಗು ಗೋವಿಂದರಾಜ ನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ ಅವರ ಬೆಂಬಲಿಗರು ಇಬ್ಬರಿಗೂ ಸಚಿವ ಸ್ಥಾನ ಸಿಗದಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲೂ ಶಾಸಕ ಅಶೋಕ ಪಟ್ಟಣ ಅವರಿಗೆ ಸಚಿವ ಸ್ಥಾನ ಸಿಗದಿರುವುದನ್ನು ಖಂಡಿಸಿ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ. ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಶಾಸಕ ನಾಡಗೌಡ ಅವರ ಬೆಂಬಲಿಗರು ಪ್ರತಿಭಟನೆ ನಡೆಸಿದರೆ, ಮುಧೋಳದಲ್ಲಿ ಶಾಸಕ ಆರ್.ಬಿ.ತಿಮ್ಮಾಪುರ ಅವರ ಬೆಂಬಲಿಗರು ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಚಿತ್ರದುರ್ಗದಲ್ಲಿ ಶಾಸಕ ಎನ್.ವೈ.ಗೋಪಾಲಕೃಷ್ಣ ಅವರ ಬೆಂಬಲಿಗರು, ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರಿಗೆ ಸಚಿವ ಸ್ಥಾನ ಕೈತಪ್ಪಿರುವುದಕ್ಕೆ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಮಣ್ಣು ತೆರವು ಕಾರ್ಯ ಪೂರ್ಣ: ರೈಲು ಸಂಚಾರ ಆರಂಭ

» ಮೊದಲನೇ ಪುಟದಿಂದ

ಪೂರ್ಣಗೊಂಡ ಬಳಿಕ ಹಳಿಯ ಸುರಕ್ಷತೆಯನ್ನು ಪರಿಶೀಲಿಸಿ, ಅಗತ್ಯ ತಾಂತ್ರಿಕ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದ ನಂತರ ರೈಲುಗಳ ಸಂಚಾರಕ್ಕೆ ಅನುಮತಿ ನೀಡಲಾಯಿತು. ಇದರಿಂದ ಬೆಂಗಳೂರು-ಮಂಗಳೂರು ರೈಲು ಮಾರ್ಗದಲ್ಲಿ ಸಂಚಾರ ಮತ್ತೆ ಸಹಜ ಸ್ಥಿತಿಗೆ ಮರಳಿದೆ.

ಮಲೆನಾಡು ಭಾಗದಲ್ಲಿ ಇನ್ನೂ ಮಳೆ ಮುಂದುವರಿಯುತ್ತಿರುವ ಹಿನ್ನಲೆ ಕೆಲವೆಡೆ ಭೂಕುಸಿತ ಸಂಭವಿಸುವ ಸಾಧ್ಯತೆ ಇರುವುದರಿಂದ ರೈಲ್ವೆ ಇಲಾಖೆ ನಿರಂತರ ನಿಗಾ ವಹಿಸಿದೆ. ಪ್ರಯಾಣಿಕರು ಪ್ರಯಾಣಕ್ಕೂ ಮುನ್ನ ರೈಲುಗಳ ವೇಳಾಪಟ್ಟಿಯನ್ನು ಅಧಿಕೃತ ಮೂಲಗಳ ಮೂಲಕ ಪರಿಶೀಲಿಸಿಕೊಂಡು ಪ್ರಯಾಣಿಸುವಂತೆ ರೈಲ್ವೆ ಇಲಾಖೆ ಮನವಿ ಮಾಡಿದೆ.

# ಅಕ್ರಮ ಕಟ್ಟಡ ನಿರ್ಮಾಣ ತೆರವಿಗೆ ಮನವಿ



• ಪ್ರಜೋದಯ ವರದಿ

**ಹಾಸನ:** ನಗರದ ರಾಘವೇಂದ್ರ ಕಾಲೋನಿ ಬೀರನಹಳ್ಳಿ ಕೆರೆ ಹತ್ತಿರದ ಓ ಶಕ್ತಿ ದೇವಸ್ಥಾನದ ಮುಂಭಾಗದಲ್ಲಿರುವ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವುದಕ್ಕೆ ತಡೆ ನೀಡಬೇಕೆಂದು ಕೋರಿ ಶ್ರೀರಾಮ ಸೇನೆಯಿಂದ ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಅವರಿಗೆ ಮನವಿ ಸಲ್ಲಿಸಲಾಯಿತು.

ನಿಗದಿತ ಜಾಗ ನಗರದ ನಾಗರಿಕರ ಉದ್ದೇಶಕ್ಕೆ ಬಳಕೆ ಆಗಬೇಕು. ಅದು ಸರ್ಕಾರಿ ಜಾಗ ಎಂದು ಬೋರ್ಡ್ ಅಳವಡಿಸಿದ್ದರೂ ಕಿತ್ತು ಹಾಕಿ ಕಟ್ಟಡ ಕಟ್ಟುತ್ತಿದ್ದಾರೆ. ಕಟ್ಟಡ ಮಾಲೀಕರ ವಿರುದ್ಧ ಕ್ರಮ ಜರುಗಿಸಬೇಕು. ಜಾಗಕ್ಕೆ ಶೀಘ್ರವೇ ಭೇಟಿ ನೀಡಿ ಕೂಡಲೇ ತೆರವುಗೊಳಿಸಬೇಕು. ಜಾಗವನ್ನು ಯಾವ ಉದ್ದೇಶಕ್ಕೆ ಮೀಸಲಿಡಲಾಗಿತ್ತು, ಈಗ ಯಾವ ಕಾಮಗಾರಿ ನಡೆಯುತ್ತಿದೆ, ಅದಕ್ಕೆ ಅನುಮತಿ ಕೊಟ್ಟವರು ಯಾರು ಎಂಬ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಶ್ರೀರಾಮ್ ಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ, ನಗರಾಧ್ಯಕ್ಷ ದರ್ಶನ್, ಪ್ರತಿಮಾ ಹಾಸನ, ದುರ್ಗಾ ಸೇನೆ ಗೋರಕ್ಷಕ ವಿನಯ ಕೆರೆಹಳ್ಳಿ, ತಾಲ್ಲೂಕು ಅಧ್ಯಕ್ಷ ಜಗದೀಶ್, ಪ್ರಧಾನ ಕಾರ್ಯ ದರ್ಶಿ ಮಹೇಶ್, ಕಾರ್ಮಿಕ ವಿಭಾಗದ ದೊರೆಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಪ್ರದೀಪ್ ಇದ್ದರು.

# ಹೊಯ್ಸಳೇಶ್ವರ ದೇವಾಲಯ ಸುತ್ತ ಸ್ವಚ್ಛ ಪರಿಸರ ನಿರ್ಮಿಸಲು ಸೂಚನೆ

• ಪ್ರಜೋದಯ ವರದಿ

**ಹಳೇಬೀಡು:** ಹೊಯ್ಸಳೇಶ್ವರ ದೇವಾಲಯದ ಸುತ್ತ ಗೂಡಂಗಡಿ ತೆರವು ಮಾಡಿ ಸ್ವಚ್ಛ ಪರಿಸರ ನಿರ್ಮಿಸುವ ಮೂಲಕ ಅಧಿಕಾರಿ ವರ್ಗ ಜಾಗೃತರಾಗಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಸೂಚಿಸಿದರು.

ಮಂಗಳವಾರ ಹಳೇಬೀಡಿಗೆ ಆಗಮಿಸಿದ ಅವರು, ಹೊಯ್ಸಳೇಶ್ವರ ದೇವಾಲಯದ ಸುತ್ತಲಿನ ಪಾದಚಾರಿ ಮಾರ್ಗದಲ್ಲಿ ಅಡೆತಡೆ ಇರಬಾರದು. ಪ್ರವಾಸಿಗರು ಮುಕ್ತವಾಗಿ ಓಡಾಡುವಂತಿರಬೇಕು. ದೇವಾಲಯದ ಕಾಂಪೌಂಡ್ ಪಕ್ಕದಲ್ಲಿರುವ ಅಂಗಡಿ, ಮುಂಗಟ್ಟುಗಳನ್ನು ತೆರವು ಮಾಡಲು ಲೋಕೋಪಯೋಗಿ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಯರು ಕ್ರಮ ಕೈಗೊಳ್ಳಬೇಕು. ಕೆರೆ ಕೋಡಿಗೆ ತ್ಯಾಜ್ಯ ಸುರಿಯುವುದು ಕೊನೆಯಾಗಬೇಕು. ಕೆರೆ ಕೋಡಿ ಹಾಗೂ ಹಳ್ಳಕ್ಕೆ ಕಸ ಸುರಿಯದಂತೆ ಎತ್ತರವಾಗಿ ಫೆನ್ಸಿಂಗ್ ಮಾಡಬೇಕು. ಸಂತೆ ಮೈದಾನದ ಹೊರಗೆ ಅಂಗಡಿ ಜೋಡಿಸದಂತೆ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಹಳೇಬೀಡು ಮುಖ್ಯರಸ್ತೆಯ ಕಾಮಗಾರಿ ತೀರಾ ವಿಳಂಬವಾಗಿದೆ. ಕಳೆದ 6 ತಿಂಗಳ ಹಿಂದಿಗೆ ಹಳೇಬೀಡಿಗೆ ಭೇಟಿ ನೀಡಿದಾಗ ಕಾಮಗಾರಿ ಚುರುಕುಗೊಳಿಸಲು ಸೂಚಿಸಿದರು



ಪೂರ್ಣ ಕೆಲಸ ಆಗಿಲ್ಲ. ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿರುವ ಗುಂಡಿ ಅಪಘಾತಕ್ಕೆ ಆಹ್ವಾನ ನೀಡುತ್ತಿದೆ. ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕೆಂದರು.

ದ್ವಾರಸಮುದ್ರ ಕೆರೆಯ ಹಳೆಯ ಸೇತುವೆಯನ್ನು ಸಂರಕ್ಷಿಸಬೇಕು. ಕೋಡಿಯಲ್ಲಿ ಹೊಸದಾಗಿ ಹಾಕಿರುವ ಕಾಂಕ್ರಿಟ್ ತೆಗೆದು ಹಿಂದೆ ಇದ್ದಂತಹ ಹಳೆಯ ಕಲ್ಲುಗಳ ಮರು ಜೋಡಣೆ ಮಾಡಿ ಬಂದೋಬಸ್ತ್ ಮಾಡಬೇಕು. ಕೆರೆ ಸೌಂದರ್ಯ ಹೆಚ್ಚುವಂತೆ ಮಾಡಿದರೆ ಪ್ರವಾಸಿಗರ ಮನಸ್ಸಿಗೆ ಹಿತ ದೊರಕುತ್ತದೆ ಎಂದರು.

ಜೈನಬಸದಿ, ಕೇದಾರೇಶ್ವರ ದೇವಾಲಯದ ಬಳಿ ಶೌಚಾಲಯ ನಿರ್ಮಿಸಲು ಕೇಂದ್ರ ಪುರಾತತ್ವ ಸರ್ವೇಕ್ಷಣೆಯ ಅಧಿನಿಯಮ ಅಡ್ಡಿಯಾಗಿದೆ. ಎರಡೂ ದೇವಾಲಯ ಬಳಿ ಸ್ವಚ್ಛತೆ ಕೈಗೊಳ್ಳಲು ಕ್ರಮ ಕೈಗೊಳ್ಳುತ್ತೇವೆ. ಪ್ರವಾಸಿಗರಿಗೆ ಸಮರ್ಪಕ ಮಾಹಿತಿ ನೀಡುವಂತಹ ಫಲಕಗಳನ್ನು ಹಾಕಬೇಕೆಂದು ಪ್ರವಾಸೋದ್ಯಮ ಅಧಿಕಾರಿಗಳಿಗೆ ಸೂಚಿಸಿದರು.

**ವಾಸದ ಮನೆ ದುರಸ್ತಿಗೆ ಬಸ್ತಿಹಳ್ಳಿ ಜನರ ಆಗ್ರಹ**

ಜೈನಬಸದಿಯ ಮುಂಭಾಗ, ಹೊಯ್ಸಳೇಶ್ವರ ದೇವಾಲಯದ ಹಿಂಭಾಗದಲ್ಲಿರುವ ಬಸ್ತಿಹಳ್ಳಿ ಗ್ರಾಮದಲ್ಲಿ ಹಳೆಯ ಮನೆ ದುರಸ್ತಿ ಮಾಡಿಕೊಳ್ಳಲು ಕೇಂದ್ರ ಪುರಾತತ್ವ ಇಲಾಖೆಯವರು ಅವಕಾಶಕೊಡುತ್ತಿಲ್ಲ. ಬೇರೆ ಜಾಗದಲ್ಲಿಯೂ ಪುನರ್ವಸತಿ ಕಲ್ಪಿಸುತ್ತಿಲ್ಲ. ಹೊಸ ಮನೆ ಕಟ್ಟುವುದಕ್ಕೂ ಅವಕಾಶ ಕೊಡುತ್ತಿಲ್ಲ. ಸೂರಿಗಾಗಿ ಪರದಾಡುವಂತಾಗಿದೆ ಎಂದು ಬಸ್ತಿಹಳ್ಳಿ ನಿವಾಸಿ ಮುರಳಿ ಮನವಿ ಮಾಡಿದರು. ಈ ಕುರಿತು ಪರಿಶೀಲನೆ ನಡೆಸಲು ಪುರಾತತ್ವ ಇಲಾಖೆ ಅಧಿಕಾರಿಗಳೊಂದಿಗೆ ಮಾತನಾಡುತ್ತೇನೆಂದು ತಿಳಿಸಿದರು.

ರಾತ್ರಿ 7 ಗಂಟೆ ಬಳಿಕ ಹಾಸನಕ್ಕೆ ಬಸ್ ಸೌಲಭ್ಯ ಇಲ್ಲದೆ ಪ್ರಯಾಣಿಕರು ಪರದಾಡುವಂತಾಗಿದೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಳಿ ಕೆಲವು ಚಾಲಕರು ಬಸ್ ನಿಲುಗಡೆ ಮಾಡುವುದಿಲ್ಲವೆಂದು ಸಾರ್ವಜನಿಕರು ಮನವಿ ಮಾಡಿದರು. ಸಾರಿಗೆ ಸಂಸ್ಥೆಯ ಚಿಕ್ಕಮಗಳೂರು ವಿಭಾಗೀಯ ನಿಯಂತ್ರಕರಿಗೆ ದೂರವಾಣಿ ಕರೆ ಮಾಡಿ ಸಿಬ್ಬಂದಿ ಪ್ರಯಾಣಿಕರ ಸ್ನೇಹಿಗಳಂತೆ ಕೆಲಸ ಮಾಡಬೇಕು. ರಾತ್ರಿ ಬಸ್ ವ್ಯವಸ್ಥೆ ಹಾಗೂ ಕಾಲೇಜು ಬಳಿ ಬಸ್ ನಿಲ್ಲುವ ವ್ಯವಸ್ಥೆ ಮಾಡುವಂತೆ ತಿಳಿಸಿದರು.

**ಬೇಗ ನಿವೇಶನ ಕೊಡಿಸಿ ಭೂದಿಗುಂಡಿ ನಿರಾಶ್ರಿತರು**

ದ್ವಾರಸಮುದ್ರ ಕೆರೆ ಕೋಡಿಹಳ್ಳದ ಹಾಸುಪಾಸಿನ ಭೂದಿಗುಂಡಿ ಹಿಂದೆ ನೆರೆ ಹಾವಳಿಯಿಂದ ಮೂರು ಮನೆ ಕೊಚ್ಚಿ ಹೋದವು. ಭೂದಿಗುಂಡಿ ಬಡಾವಣೆ ಮುಳುಗುವ ಸ್ಥಿತಿಗೆ ಬಂದಿತ್ತು. 175 ನಿರಾಶ್ರಿತ ಕುಟುಂಬಗಳಿಗೆ ಒಂಟೆಮುಳ್ಳಿ ಗುಡ್ಡದಲ್ಲಿ ಪುನರ್ವಸತಿ ಕಲ್ಪಿಸಲು ಜಾಗ ನಿಗಧಿ ಮಾಡಿದರು. ಜಮೀನು ಸಮತಟ್ಟು ಮಾಡಿ ನಿವೇಶನ ಹಂಚಿಕೆ ಮಾಡುವ ಕೆಲಸ ವಿಳಂಬವಾಗಿದೆ ಎಂದು ಭೂದಿಗುಂಡಿ ನಿವಾಸಿ ಮಂಜುನಾಥ ಮನವಿ ಮಾಡಿದರು.

ನಿವೇಶನ ಕೊಡಲು ಶೀಘ್ರವೇ ಕಾರ್ಯಪ್ರವೃತ್ತರಾಗಬೇಕೆಂದು ಸಕಲೇಶಪುರ ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರಿಗೆ ಸೂಚಿಸಿದರು. ನಿವೇಶನ ಕೊಟ್ಟ ನಂತರ ಅಪಾಯದ ಭೂದಿಗುಂಡಿ ಪ್ರದೇಶದಲ್ಲಿ ಮನೆ ನಿರ್ಮಿಸದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕಿ ರೂಪಾ, ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಕ್ಯೂರೈಟರ್ ಹೆಚ್. ಸಿ.ಕುಮಾರ್, ಕೇಂದ್ರ ಪುರಾತತ್ವ ನೌಕರ ಕುಮಾರಸ್ವಾಮಿ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣ, ಪತ್ರಕರ್ತರಾದ ಹೆಚ್.ಎಸ್.ಅನಿಲ್‌ಕುಮಾರ್, ರಘುನಾಥ, ಎಂ.ಸಿ.ಕುಮಾರ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಬಿ.ಎಸ್.ಸೋಮಶೇಖರ್, ಪುರಾತತ್ವ ನೌಕರ ಕುಮಾರಸ್ವಾಮಿ ಪಾಲ್ಗೊಂಡಿದ್ದರು.

# ಸಾರ್ವಜನಿಕರಿಗೆ ತೊಂದರೆಯಾಗದಂತೆ ಯೋಜನೆ ಜಾರಿ

» ಮೊದಲನೇ ಪುಟದಿಂದ

ಸಮಸ್ಯೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ವಿಸ್ತೃತ ಚರ್ಚೆ ನಡೆಸ ಲಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಸದಸ್ಯರ ಅವಧಿ ಮುಕ್ತಾಯಗೊಂಡ ಹಿನ್ನಲೆ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದ್ದು, ಅವರು ಸಾರ್ವಜನಿಕರಿಗೆ ಸುಲಭವಾಗಿ ಲಭ್ಯವಾಗುತ್ತಿಲ್ಲವೆಂಬ ದೂರುಗಳ ಕುರಿತು ಪ್ರತಿಕ್ರಿಯಿಸಿದ ಶಾಸಕ ಸಿಮೆಂಟ್ ಮಂಜು, ಆಡಳಿ ತಾಧಿಕಾರಿಗಳು ಗ್ರಾಮ ಪಂಚಾಯಿತಿಗಳಲ್ಲಿ ನಿಗದಿತ ಸಮಯ ಮೀಸಲಿಟ್ಟು ಸಾರ್ವಜನಿಕರಿಗೆ ಸೇವೆ ಒದಗಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದೆಂದು ಹೇಳಿದರು.

ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ ಚಂದ್ರಶೇಖರ್, ಕಾರ್ಯನಿರ್ವಹಣಾಧಿಕಾರಿ ಗಂಗಾಧರನ್, ಸಹಾಯಕ ನಿರ್ದೇಶಕ ಹರೀಶ್ ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ದೊಡ್ಡಮತಿಘಟ್ಟದಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕಾರೆಕೆರೆ ಕೃಷಿ ಮಹಾವಿದ್ಯಾಲಯದ ಬಿಎಸ್ಸಿ (ಕೃಷಿ) ಅಂತಿಮ ವರ್ಷದ ವಿದ್ಯಾರ್ಥಿಗಳು ದೊಡ್ಡಮತಿಘಟ್ಟ ಗ್ರಾಮದಲ್ಲಿ ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದದಲ್ಲಿ ರಾಸಾಯನಿಕ ಸಿಂಪಡಣೆಯ ವೇಳೆ ಸುರಕ್ಷತಾ ಕ್ರಮಗಳು ಎಂಬ ವಿಷಯದ ಕುರಿತು ಜಾಗೃತಿ ಮೂಡಿಸಲಾಯಿತು.

ವಿದ್ಯಾರ್ಥಿಗಳುವೈಯಕ್ತಿಕ ಸುರಕ್ಷತಾ ಸಾಧನಗಳಾದ ಕೈಗವಸು, ಮಾಸ್ಕ್, ಮುಖ ರಕ್ಷಣಾ ಕವಚ, ಬೂಟು ಹಾಗು ಪೂರ್ಣ ತೋಳಿನ ಉಡುಪುಗಳ ಮಹತ್ವವನ್ನು ಪ್ರಾತ್ಯಕ್ಷಿಕೆ ಮೂಲಕ ವಿದ್ಯಾರ್ಥಿಗಳು ತಿಳಿಸಿಕೊಟ್ಟರು.

ಔಷಧಿ ಮಿಶ್ರಣದ ಸರಿಯಾದ ವಿಧಾನ, ಸಿಂಪಡಣಾ ಯಂತ್ರದ ಬಳಕೆ, ಗಾಳಿಯ ದಿಕ್ಕಿನಲ್ಲಿ ಸಿಂಪಡಣೆ ಮಾಡುವ ಅಗತ್ಯ ಹಾಗು ಸಿಂಪಡಣೆ ನಂತರ ಕೈ ಮತ್ತು ಉಪಕರಣಗಳನ್ನು ಸ್ವಚ್ಛಗೊಳಿ ಸುವ ಕ್ರಮಗಳನ್ನು ಪ್ರದರ್ಶಿಸಲಾ ಯಿತು. ಜೊತೆಗೆ ತಪ್ಪು ಮತ್ತು ಸರಿಯಾದ ಸಿಂಪ ಡಣೆಯ ವಿಧಾನವನ್ನು ನಾಟಕದ ರೂಪದಲ್ಲಿ ಪ್ರದರ್ಶಿಸಿ ರೈತರಿಂದಲೇ ತಪ್ಪುಗಳನ್ನು ಗುರುತಿ ಸುವಂತೆ ಮಾಡಿ ಜಾಗೃತಿ ಮೂಡಿಸಲಾಯಿತು.

ಕೃಷಿ ಔಷಧಿ ಲೇಬಲ್ ಓದುವ ವಿಧಾನ, ವಿಷಕಾರಿ ಮಟ್ಟವನ್ನು ಸೂಚಿಸುವ ಬಣ್ಣದ ಪಟ್ಟಿಗಳು, ಪ್ರಥಮ ಚಿಕಿತ್ಸೆ ಕ್ರಮಗಳು ಹಾಗು ಖಾಲಿ ಔಷಧಿ ಬಾಟಲಿ ಗಳನ್ನು ಮರುಬಳಕೆ ಮಾಡಬಾರದು ಎಂಬ ಸಂದೇಶ ತಿಳಿಸಲಾಯಿತು. ಗ್ರಾಮದ 45ಕ್ಕೂ ಹೆಚ್ಚು ರೈತರು ಪಾಲ್ಗೊಂಡಿದ್ದರು.

# ಪರಿಷ್ಕೃತ ಕನಿಷ್ಠ ವೇತನ ಜಾರಿಗೆ ಆಗ್ರಹ

## ಆರೋಗ್ಯ ಇಲಾಖೆ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘದಿಂದ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಪರಿಷ್ಕೃತ ಕನಿಷ್ಠ ವೇತನ ಜಾರಿ ಮಾಡಬೇಕೆಂದು ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆ ವಿವಿಧ ವೃಂದದ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಅಕ್ಷಯ್‌ಗೌಡ ಅವರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರವು ಮೇ 22 ರಂದು ಕನಿಷ್ಠ ವೇತನ ಪರಿಷ್ಕರಣೆ ಮಾಡಿರುವುದರಿಂದ ಕಾರ್ಮಿಕರ 8 ವರ್ಷಗಳ ಬೇಡಿಕೆಗೆ ದೊರೆತ ನ್ಯಾಯವಾಗಿತ್ತು. ಆರ್ಥಿಕ ಇಲಾಖೆ ಜುಲೈ 15 ರಂದು ಹೊರಡಿಸಿದ ಜ್ಞಾಪನಾ ಹಾಗು ಜುಲೈ 29ರಂದು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಪ್ರಧಾನ ನಿರ್ದೇಶಕರು ಹೊರಡಿಸಿದ ಸುತ್ತೋಲೆ ನೌಕರರಲ್ಲಿ ಆತಂಕ ಉಂಟುಮಾಡಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ವೇತನ ಪರಿಷ್ಕರಣೆ ಆದೇಶ ಹಿಂಪಡೆಯಬಾರದೆಂದು ಆಗ್ರಹಿಸಿದರು.

ಪರಿಷ್ಕೃತ ಕನಿಷ್ಠ ವೇತನವನ್ನು ಮರು ಪರಿಶೀಲಿಸುವ ಅಥವಾ ಹಿಂಪಡೆಯುವ ಯಾವುದೇ ಪ್ರಯತ್ನ ಕಾರ್ಮಿಕ ವಿರೋಧಿ ಕ್ರಮವಾಗಿದೆ. ಸರ್ಕಾರದ ಈ ನಿಲುವು ನೌಕರರಲ್ಲಿ ತೀವ್ರ ನಿರಾಸೆ ಮೂಡಿಸಿದೆ. ಒಂದೆಡೆ ಖಾಸಗಿ ಸಂಸ್ಥೆಗಳು ವೇತನ ಜಾರಿಗೆ ಹಿಂದೇಟು




ಹಾಕುತ್ತಿದ್ದರೆ, ಸರ್ಕಾರವೇ ಜಾರಿಗೊಳಿಸಿದ ವೇತನವನ್ನು ನೀಡಲು ಹಿಂದೇಟು ಹಾಕುತ್ತಿರುವುದು ದುರ ದೃಷ್ಟಕರ ಎಂದರು.

ರಾಜ್ಯದ ಆರೋಗ್ಯ, ವೈದ್ಯಕೀಯ ಶಿಕ್ಷಣ ಹಾಗು ಆಯುಷ್ ಇಲಾಖೆಗಳಲ್ಲೇ 25 ಸಾವಿರಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. ಲಕ್ಷಾಂತರ ಹೊರಗುತ್ತಿಗೆ ನೌಕರರ ಬದುಕು ಮತ್ತು ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಪರಿಷ್ಕೃತ ಕನಿಷ್ಠ ವೇತನವನ್ನು ಮರು ಪರಿಶೀಲನೆ ನಡೆಸಬಾರದೆಂದು ಆಗ್ರಹಿಸಿದ ಅವರು, ಸರ್ಕಾರ ಆದೇಶ ವಾಪಾಸ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಮುಂದಾದರೆ ರಾಜ್ಯದ ಎಲ್ಲಾ ಇಲಾಖೆಗಳ ಹೊರಗುತ್ತಿಗೆ ನೌಕರರು ಹಾಗು ವಿವಿಧ ಕಾರ್ಮಿಕ ಸಂಘಟನೆಗಳು ರಾಜ್ಯವ್ಯಾಪಿ ಹೋರಾಟ ಆರಂಭಿಸಲಿವೆ ಎಂದು ಎಚ್ಚರಿಸಿದರು.

ಸಂಘದ ಪ್ರಮುಖರಾದ ಸುದರ್ಶನ್, ಕುಮಾರ್, ದಿಲೀಪ್, ಲೋಕೇಶ್, ಶೃತಿ ಇದ್ದರು.

# ಮೊಂಡತನದ ಮಾತು ಬಿಟ್ಟು ಅಭಿವೃದ್ಧಿಗೆ ಗಮನಹರಿಸಿ

» ಮೊದಲನೇ ಪುಟದಿಂದ

ಸರ್ಕಾರ ಎಂದರೆ ಜನರ ಸರ್ಕಾರ. ರೈತರ ನೆರವಿಗೆ ಬಂದು ಸಾಲಮನ್ನಾ ಮಾಡಬೇಕು ಅಷ್ಟೇ ಎಂದು ಹೇಳಿದರು.

ಕೆಪಿಎಸ್‌ಸಿ ಬದಲಾಗಿ ಕೆಇಎ ಮೂಲಕ ನೇಮಕಾತಿ ನಡೆಸುವಂತೆ ಒತ್ತಾಯಿಸಿರುವ ಕುರಿತು ಮಾತನಾಡಿದ ಅವರು, ನಾನು ಪಶುಸಂಗೋಪನೆ ಸಚಿವರಾಗಿದ್ದಾಗ 650 ಪಶು ವೈದ್ಯರನ್ನು ನೇರ ನೇಮಕಾತಿ ಮಾಡಿದ್ದೆ. ಕೆಪಿಎಸ್‌ಸಿಗೆ ನೇಮಕಾತಿ ಕೊಟ್ಟರೆ ಅಲ್ಲಿ ಹಣದ ವ್ಯವಹಾರ ನಡೆ ಯುತ್ತದೆಂಬ ಆರೋಪಗಳಿವೆ. ಪಶು ವೈದ್ಯರ ಹುದ್ದೆಗೆ 80 ಲಕ್ಷ ರೂಪಾಯಿ ನೀಡಬೇಕಾಗುತ್ತದೆ ಎಂಬ ಮಾತುಗಳು ಕೇಳಿ ಬರುತ್ತಿವೆ. 80 ಲಕ್ಷ ನೀಡಿ ವೈದ್ಯರಾದವರು ನಂತರ ರೈತರಿಂದಲೇ ಹಣ ವಸೂಲಿ ಮಾಡುವ ಪರಿಸ್ಥಿತಿ ಬರಬಹುದು. ಆದ್ದರಿಂದ ನಮ್ಮ ಅವಧಿಯಂತೆ ಮೆರಿಟ್ ಹಾಗು ಮೀಸಲಾತಿ ಆಧಾರದ ಮೇಲೆ ಪಾರದರ್ಶಕವಾಗಿ ನೇರ ನೇಮಕಾತಿ ನಡೆಸಬೇಕೆಂದು ಒತ್ತಾಯಿಸಿದರು.

# ಟ್ರ್ಯಾಕ್ಟರ್ ಡಿಕ್ಕಿ: ಬೈಕ್ ಸವಾರ ಸಾವು

**ಹಾಸನ:** ಟ್ರ್ಯಾಕ್ಟರ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಮೃತ ಪಟ್ಟಿರುವ ಘಟನೆ ನಗರದ ಹಾಲುವಾಗಿಲು ಸಮೀಪ ನಡೆದಿದೆ.

ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ ಹೋಬಳಿ ಕಾಗನೂರು ಗ್ರಾಮದ ಸಾಗರ್ ಮೃತ. ಬೈಕ್‌ನ ಹಿಂಬದಿಯಲ್ಲಿ ಪ್ರಯಾಣಿಸುತ್ತಿದ್ದ ಸಿರಿಗಾವರ ಗ್ರಾಮದ ಮಿಥುನ್‌ಗೌಡ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾನೆ.

ಸಾಗರ್ ಬೈಕ್‌ನಲ್ಲಿ ಮಿಥುನ್‌ಗೌಡ ಅವರನ್ನು ಕೂರಿಸಿಕೊಂಡು ಶಂಕರನಹಳ್ಳಿ ಕಡೆಗೆ ತೆರಳುತ್ತಿದ್ದ ವೇಳೆ, ಮುಂಭಾಗದಲ್ಲಿ ಸಾಗುತ್ತಿದ್ದ ಟ್ರ್ಯಾಕ್ಟರ್ ಚಾಲಕ ಏಕಾಏಕಿ ಬಲಕ್ಕೆ ತಿರುಗಿಸಿದ್ದರಿಂದ ಬೈಕ್ ಡಿಕ್ಕಿ ಹೊಡೆದಿದೆ. ಈ ವೇಳೆ ಸಾಗರ್‌ಗೆ ತಲೆ, ಮುಖ ಹಾಗು ಎದೆ ಭಾಗಕ್ಕೆ ಗಂಭೀರ ಗಾಯಗಳಾಗಿದ್ದರೆ, ಮಿಥುನ್‌ಗೌಡ ಅವರಿಗೆ ಸೊಂಟ, ಬಲಕಾಲು ಸೇರಿ ದೇಹದ ವಿವಿಧ ಭಾಗಗಳಿಗೆ ಗಾಯಗಳಾಗಿವೆ. ಇಬ್ಬರನ್ನೂ ಮೊದಲಿಗೆ ಹಾಸನದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಬಳಿಕ ಹೆಚ್ಚಿನ ಚಿಕಿತ್ಸೆಗೆ ಜನಪ್ರಿಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಸಾಗರ್ ಮೃತಪಟ್ಟಿದ್ದಾರೆ. ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶಿವಲಿಂಗೇಗೌಡ ಮೇಲೆ ನಿರೀಕ್ಷೆಗಳ ಜೊತೆಗೆ ಸಾಕಷ್ಟು ಸವಾಲು

» ಮೊದಲನೇ ಪುಟದಿಂದ

ವರ್ಷಗಳಿಂದಹೋರಾಟನಡೆಸುತ್ತಿದ್ದಾರೆ. ಈ ಸಮಸ್ಯೆಗೆ ಆಡಳಿತಾತ್ಮಕ ಸ್ಪಷ್ಟತೆ ನೀಡುವುದು ಸಚಿವರ ಆದ್ಯತೆಗಳಲ್ಲಿ ಒಂದಾಗಲಿದೆ.

ಹೇಮಾವತಿ ಜಲಾಶಯ ಭೂಸಂತ್ರಸ್ತರ ಬೇಡಿಕೆಗಳು, ನೀರಾವರಿ ನಾಲೆಗಳ ಆಧುನೀಕರಣ, ಕೆರೆಗಳ ಪುನರುಜ್ಜೀವನ, ಏತ ನೀರಾವರಿ ಯೋಜನೆಗೆ ಒತ್ತು, ಸಣ್ಣ ನೀರಾವರಿ ಯೋಜನೆಗಳ ವಿಸ್ತರಣೆ ಬಲಪಡಿಸುವ ಅಗತ್ಯವೂ ಎದುರಾಗಿದೆ.

**ವನ್ಯಜೀವಿ-ಮಾನವ ಸಂಘರ್ಷಕ್ಕೆ ಬೇಕಿದೆ ಪರಿಹಾರ**

ಸಕಲೇಶಪುರ, ಆಲೂರು, ಬೇಲೂರು ಭಾಗಗಳಲ್ಲಿ ಕಾಡಾನೆಗಳ ಹಾವಳಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ಬೆಳೆ ಹಾನಿ ಮತ್ತು ಜೀವಹಾನಿ ಸಾಮಾನ್ಯವಾಗುತ್ತಿದೆ. ಅರಸೀಕೆರೆ ಭಾಗ ದಲ್ಲಿ ಚಿರತೆಗಳ ಓಡಾಟವೂ ಜನರಲ್ಲಿ ಆತಂಕ ಮೂಡಿಸಿದೆ. ಅರಣ್ಯ ಇಲಾಖೆಯ ತಾತ್ಕಾಲಿಕ ಕ್ರಮಗಳ ಜೊತೆಗೆ ಶಾಶ್ವತ ಕಾರ್ಯಯೋಜನೆ, ಆನೆ ತಡೆ ಮೂಲಸೌಕರ್ಯ, ತ್ವರಿತ ಪರಿಹಾರ ವಿತರಣೆ, ಅರಣ್ಯಗ್ರಾಮ ಸಮನ್ವಯ ಮತ್ತು ಮುನ್ನೆಚ್ಚರಿಕೆ ವ್ಯವಸ್ಥೆ ರೂಪಿಸುವ ಅಗತ್ಯವನ್ನು ಜನರು ಒತ್ತಿ ಹೇಳುತ್ತಿದ್ದಾರೆ.

**ಮಹತ್ವದ ಯೋಜನೆಗೆ ಬೇಕಿದೆ ಮರುಜೀವ**

ಹಾಸನ ವಿಮಾನ ನಿಲ್ದಾಣ ಕಾಮಗಾರಿ, ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳ ಪೂರ್ಣಗೊಳಿಕೆ, ಎಸ್.ಎಂ.ಕೃಷ್ಣ ಬಡಾವಣೆಗೆ ಮೂಲಸೌಕರ್ಯ, ಬಿಜಿಎಸ್‌ಕೆ ಬಡಾವಣೆ ನಿವೇಶನ ಹಂಚಿಕೆ, ಕೈಗಾರಿಕಾ ಪ್ರದೇಶಗಳ ವಿಸ್ತರಣೆ, ಕುಡಿಯುವ ನೀರಿನ ಯೋಜನೆಗಳು, ನಗರ ಸಂಚಾರ ದಟ್ಟಣೆ, ಒಳಚರಂಡಿ ಮತ್ತು ಘನತ್ಯಾಜ್ಯ ನಿರ್ವಹಣೆ ಸೇರಿ ಹಲವು ನಗರಾಭಿವೃದ್ಧಿ ಯೋಜನೆಗಳು ಜನರ ನಿರೀಕ್ಷೆಯಲ್ಲಿವೆ.

**ಪ್ರವಾಸೋದ್ಯಮದಲ್ಲಿ ಅಪಾರ ಅವಕಾಶ**

ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಸಕಲೇಶಪುರ, ಮಂಜರಾಬಾದ್ ಕೋಟೆ, ಬಿಸಿಲೆಘಾಟ್, ಜೇನುಕಲ್ಲು ಬೆಟ್ಟ ಸೇರಿ ಜಿಲ್ಲೆಯ ಪ್ರವಾಸಿ ತಾಣಗಳು ರಾಷ್ಟ್ರೀಯ ಹಾಗು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿವೆ. ಆದರೂ ಗುಣಮಟ್ಟದ ರಸ್ತೆ, ಸ್ವಚ್ಛತೆ, ಮಾಹಿತಿ ಕೇಂದ್ರ, ವಾಹನ ನಿಲುಗಡೆ, ವಸತಿ ಹಾಗು ಪ್ರವಾಸಿಗರ ಸೌಲಭ್ಯಗಳ ಕೊರತೆಯಿಂದ ಪ್ರವಾಸೋದ್ಯಮದ ಸಂಪೂರ್ಣ ಸಾಮರ್ಥ್ಯ ಬಳಕೆಯಾಗಿಲ್ಲ. ಪ್ರವಾಸೋದ್ಯಮ ಇಲಾಖೆ ಯೊಂದಿಗೆ ಸಮನ್ವಯ ಸಾಧಿಸಿ ಸಮಗ್ರ ಅಭಿವೃದ್ಧಿ ಯೋಜನೆ ಜಾರಿಗೊಳಿಸಿದರೆ ಉದ್ಯೋಗ ಮತ್ತು ಸ್ಥಳೀಯ ಆರ್ಥಿಕತೆಗೆ ಹೊಸ ಅವಕಾಶಗಳು ಸೃಷ್ಟಿಯಾಗುವ ಸಾಧ್ಯತೆ ಇದೆ.

# ಜೆಡಿಎಸ್ ನಾಯಕರ ಹಣಿಯಲು ಹೊಸ ಸಂಪುಟ ರಚನೆ

» ಮೊದಲನೇ ಪುಟದಿಂದ

ಮಹಿಳಾ ಪ್ರತಿನಿಧಿತ್ವವನ್ನು ಕಡೆಗಣಿಸಿ ರುವುದು ಮಹಿಳೆಯರ ಹಕ್ಕಿಗೆ ಮಾಡಿದ ಅನ್ಯಾಯವಾಗಿದೆ. ಮಹಿಳಾ ಮೀಸಲಾತಿ ಕುರಿತು ಸರ್ಕಾರದ ನಿಲುವು ಈ ನಿರ್ಧಾರ ದಲ್ಲೇ ಪ್ರತಿಬಿಂಬಿಸುತ್ತದೆಂದು ಟೀಕಿಸಿದರು.

ಸಚಿವ ಸಂಪುಟದಲ್ಲಿ ಪ್ರಾದೇಶಿಕ ಅಸಮತೋಲನವೂ ಕಂಡು ಬರುತ್ತಿದ್ದು, ಉಡುಪಿ, ಕೋಲಾರ ಸೇರಿ ಹಲವು ಜಿಲ್ಲೆಗಳಿಗೆ ಸಮರ್ಪಕ ಪ್ರಾತಿನಿಧ್ಯ ದೊರೆತಿಲ್ಲ. ಜಿಲ್ಲೆಯಿಂದ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರಿಗೆ ಸಚಿವ ಸ್ಥಾನ ನೀಡಿರುವುದನ್ನು ಸ್ವಾಗತಿಸುತ್ತೇವೆ. ಒಟ್ಟಾರೆ ಎಲ್ಲಾ ಜಿಲ್ಲೆಗಳಿಗೂ ನ್ಯಾಯ ಸಿಕ್ಕಿಲ್ಲ. ಹಲವು ಬಾರಿ ಶಾಸಕರಾಗಿ ಆಯ್ಕೆಯಾದ ಹಿರಿಯ ನಾಯಕರನ್ನು ಕಡೆಗಣಿಸಿರುವುದಕ್ಕೂ ಅಸಮಾಧಾನ ವ್ಯಕ್ತವಾಗಿದೆ ಎಂದರು.

ಸಚಿವ ಸಂಪುಟ ರಚನೆಗೂ ಮುನ್ನ ಎರಡು ತಿಂಗಳ ಕಾಲ ಹಲವು ಶಾಸಕರು ಹಾಗೂ ಸಚಿವರು ದೆಹಲಿಗೆ ತೆರಳಿದ್ದರು. ಅಲ್ಲಿ ನಡೆದ ಚರ್ಚೆಗಳ ಕುರಿತು ಸರ್ಕಾರ ಸ್ಪಷ್ಟನೆ ನೀಡಬೇಕು. ಚಿಕ್ಕಮಗಳೂರು ಜಿಲ್ಲೆಯ ಗಾಯತ್ರಿ ಶಾಂತೇಗೌಡ ಅವರಂತಹವರಿಗೆ ಸಚಿವ ಸ್ಥಾನ ನೀಡಬಹು ದಾಗಿತ್ತು. ಹಿರಿಯ ಶಾಸಕ ಗೋಪಾಲಕೃಷ್ಣ ಸೇರಿ ವಾಲ್ಮೀಕಿ ಸಮುದಾಯದ ಹಿರಿಯ ನಾಯಕರಿಗೆ ಅವಕಾಶ ನೀಡದೆ, ಮೊದಲ ಬಾರಿಗೆ ಆಯ್ಕೆಯಾದವರಿಗೆ ಸಚಿವ ಸ್ಥಾನ ನೀಡಿರು ವುದು ಪ್ರಶ್ನಾರ್ಹವಾಗಿದೆ. ಹಿಂದುಳಿದ ವರ್ಗದ ನಾಯಕ ಮಂಕಾಳ ವೈದ್ಯ ಅವರಿಗೂ ಅವಕಾಶ ಸಿಕ್ಕಿಲ್ಲ ಎಂದು ಹೇಳಿದರು.

ರಾಜ್ಯದಲ್ಲಿ ಬರ ಹಾಗು ಪ್ರವಾಹ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸರ್ಕಾರ ವಿಫಲವಾಗಿದೆ. ಜಿಲ್ಲೆ ಸೇರಿ ಹಲವು ಭಾಗಗಳಲ್ಲಿ ಬರದ ಸಮಸ್ಯೆ ತೀವ್ರವಾಗಿದೆ. ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಿಂದ ಸರ್ಕಾರಿ ಇಲಾಖೆಗಳ ಕಾರ್ಯಗಳು ಕುಂಠಿತಗೊಂಡಿವೆ ಎಂದು ದೂರಿದರು.

## ಮತದಾರರ ಹಕ್ಕು ರಕ್ಷಣೆಗೆ ಆದ್ಯತೆ ನೀಡಿ : ಶಾಸಕ ಹೆಚ್.ಕೆ.ಕುಮಾರಸ್ವಾಮಿ

# ಒಂದು ಮತವೂ ಕೈತಪ್ಪದಂತೆ ಕಾರ್ಯನಿರ್ವಹಿಸಿ

• ಪ್ರಜೋದಯ ವರದಿ

**ಸಕಲೇಶಪುರ:** ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಯಾವುದೇ ಪಕ್ಷದ ಮತದಾರರ ಹೆಸರು ಕೈತಪ್ಪದಂತೆ ಕಾರ್ಯನಿರ್ವಹಿಸುವುದು ಎಲ್ಲರ ಜವಾಬ್ದಾರಿ ಎಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಹೇಳಿದರು.

ಪಟ್ಟಣದಲ್ಲಿ ನಡೆದ ಬಿಎಲ್‌ಎ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋ ಗವು ಮತದಾರರ ಪಟ್ಟಿ ಪರಿಷ್ಕರಣೆಗೆ ನಿಗದಿಪಡಿಸಿದ್ದ ಗಡುವನ್ನು ಎಂಟು ದಿನ ವಿಸ್ತರಿಸಿದ್ದರೂ ಇನ್ನೂ ಹಲವು ಮಾಹಿತಿಗಳು ಸ್ಥಳೀಯ ಮಟ್ಟದಲ್ಲಿ ಸ್ಪಷ್ಟವಾಗಿ ಲಭ್ಯವಾಗಿಲ್ಲ ಎಂದು ತಿಳಿಸಿದರು.

ಕ್ಷೇತ್ರ ವ್ಯಾಪ್ತಿಯ ಸಕಲೇಶಪುರ, ಆಲೂರು ಹಾಗೂ ಕಟ್ಟಾಯ ಹೋಬಳಿ ಪ್ರದೇಶಗಳಲ್ಲಿ ಒಟ್ಟು 17,251 ಮತದಾರರ ಹೆಸರುಗಳನ್ನು ಈಗಾಗಲೇ ಅಳಿಸಲು ಗುರುತಿಸಲಾಗಿದೆ, ಸುಮಾರು 2.50 ಲಕ್ಷ ಮತದಾರರ ಪೈಕಿ ಈ ಸಂಖ್ಯೆ ಗಮನಾರ್ಹವಾಗಿದೆ ಎಂದು ಹೇಳಿದರು.

ಬಿಎಲ್‌ಒಗಳಿಗೆ ಅಗತ್ಯ ಮಾಹಿತಿಯನ್ನು ಇನ್ನಷ್ಟು ಸ್ಪಷ್ಟವಾಗಿ ನೀಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟ ಅವರು, ಹೊಸ ಮತದಾರರ ನೋಂದಣಿಗೆ ಅಗತ್ಯವಾದ ಫಾರ್ಮ್-6 ಕುರಿತು ಹಲವೆಡೆ ಸಮರ್ಪಕ ಮಾಹಿತಿ ತಲುಪಿಲ್ಲ. ಕೆಲವು ಕಡೆ ಅರ್ಜಿಗಳು ಲಭ್ಯವಾಗದಿರುವುದು ಹಾಗೂ ಆನ್‌ಲೈನ್



ಮೂಲಕ ಅರ್ಜಿ ಸಲ್ಲಿಸುವ ಬಗ್ಗೆ ಅರಿವಿನ ಕೊರತೆ ಇದೆ ಎಂದು ತಿಳಿಸಿದರು.

ಮಲೆನಾಡು ಪ್ರದೇಶದಲ್ಲಿ ಕೂಲಿ ಕಾರ್ಮಿಕರು ಹಾಗೂ ಗ್ರಾಮೀಣ ಭಾಗದ ಜನರಿಗೆ ಆನ್‌ಲೈನ್ ಪ್ರಕ್ರಿಯೆ ಕುರಿತು ಸಾಕಷ್ಟು ಅರಿವು ಇಲ್ಲದಿರುವುದರಿಂದ, ಅಧಿಕಾರಿಗಳು ಮತ್ತು ಪಕ್ಷದ ಕಾರ್ಯಕರ್ತರು ಹೆಚ್ಚಿನ ಜಾಗೃತಿ ಮೂಡಿಸಬೇಕು. ಈ ಕುರಿತು ಎಇಆರ್‌ಒ, ಬಿಎಲ್‌ಒಗಳು ಹಾಗೂ ಸಂಬಂಧಿತ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಸಭೆ ನಡೆಸಿ ಅಗತ್ಯ ಮಾಹಿತಿ ನೀಡ ಬೇಕೆಂದರು.

ಯಾರೊಬ್ಬರ ಮತವೂ ಕೈಬೀಡಬಾರದು. ಮತದಾನದ ಹಕ್ಕು ಪ್ರತಿಯೊಬ್ಬ ನಾಗರಿಕನ ಹಕ್ಕಾಗಿದೆ. ಇದು ಯಾವುದೇ ಪಕ್ಷದ ವಿಚಾರವಲ್ಲ, ಪ್ರತಿಯೊಬ್ಬ ಅರ್ಹ ಮತದಾರರ ಹಕ್ಕನ್ನು ರಕ್ಷಿಸುವುದು ನಮ್ಮ ಉದ್ದೇಶ ಎಂದು ಹೇಳಿದರು.

ಸಭೆಯಲ್ಲಿ ಪಕ್ಷದ ಮುಖಂಡರು ಮತದಾರರ ನೋಂದಣಿ ಕಾರ್ಯದಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಎಲ್ಲೆಲ್ಲಿ ಸಮಸ್ಯೆಗಳಿದ್ದರೂ ಕೂಡಲೇ ಮಾಹಿತಿ ನೀಡುವಂತೆ ಸೂಚಿಸಿದರು. ಚುನಾವಣಾ ಆಯೋಗದ ಅಧಿಕಾರಿಗಳೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಇನ್ನೂ ಅವಕಾಶವಿದ್ದು, ಅಗತ್ಯ ದಾಖಲೆಗಳು ಹಾಗೂ ಮಾಹಿತಿಯೊಂದಿಗೆ ಅರ್ಹ ಮತದಾರರು ಹೆಸರು ಸೇರ್ಪಡೆ ಅಥವಾ ತಿದ್ದುಪಡಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಕೊಳ್ಳಬೇಕೆಂದರು. ಅಧಿಕಾರಿಗಳು ಮತ್ತು ಪಕ್ಷದ ಕಾರ್ಯಕರ್ತರು ಸಮನ್ವಯದಿಂದ ಕೆಲಸ ಮಾಡಿದರೆ ಯಾವುದೇ ಅರ್ಹ ಮತದಾರರ ಹಕ್ಕು ಕಸಿದುಕೊಳ್ಳುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019